# ಗ್ರಾಮೋದ್ಧಾರವಾಗುವುದೆಂದು?

ರೈತನೆ ಹಳ್ಳಿಯ ದೇವರು, ಮಿತ್ರಾ
ರೈತನೆ ದೇಶಕ್ಕೆ ಬೆಂಬಲನು–
ಈತನ ಸುಖವನು ಸಾಧಿಸು, ಮಿತ್ರಾ
ಈಶನು ಎಮ್ಮನು ಮೆಚ್ಚುವನು–

–ಕೋಗಿಲೆ.

**ಆ.ಮು. ಮುನೇಗೌಡ.**

# ನಮ್ಮ ಆಹಾರ

ನಮಗೆ ಎಲ್ಲಕ್ಕಿಂತಲೂ, ದೇಹಾರೋಗ್ಯವೇ ಮುಖ್ಯವಾದುದಾಗಿದೆ. ಇಂತಹ ಆರೋಗ್ಯಕ್ಕೆ ಆಹಾರವೇ ತಳಪಯ ಆದರೂ ಸಹ 'ಕಣ್ಣು ಕಾಣದ ಹೊಟ್ಟೆಗೆ ಕಲ್ಲು ಮುಳ್ಳು' ಎಂದ ಹಾಗೆ, ಸಮಯಕ್ಕೆ ಸಿಕ್ಕಿದ್ದು ವರಪ್ರಸಾದವೆಂಬ ಭಾವನೆಯಿಂದ ತಿಂದು, ಈ ದೇಹವೆಂಬ ಸೂಕ್ಷ್ಮ ಕಾರ್ಖಾನೆಯನ್ನು ನಿರ್ಲಕ್ಷಿಸಿದ್ದೇವೆ. ನಮ್ಮ ಸುತ್ತಮುತ್ತಲಿನ ಅನಾರೋಗ್ಯಕ್ಕೂ, ದೌರ್ಬಲ್ಯಕ್ಕೂ ಬಹುಮಟ್ಟಿಗೆ ನಮ್ಮ ಆಹಾರ ವಿಷಯದಲ್ಲಿ ವಿಚಕ್ಷಣೆಯಿಲ್ಲದಿರುವುದೇ ಕಾರಣವೆಂಬುದು ನವೀನ ಸಂಶೋಧಕರ ಅಭಿಪ್ರಾಯವಾಗಿರುವುದಲ್ಲದೆ, ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದರ ನಿಜತ್ವ ಅನುಭವಕ್ಕೆ ಬಂದಿರುತ್ತದೆ. ಇತ್ತೀಚೆಗೆ ಆಹಾರ ವಿಜ್ಞಾನದ ವಿಚಾರದಲ್ಲಿ ಎಡಬಿಡದ ಸಂಶೋಧನೆಗಳು ನಡೆಯುತ್ತಿರುವುದರಿಂದ ಪ್ರಪಂಚದ ಎಲ್ಲಾ ಭಾಗದ ಜನರಿಗೂ ಇದರ ವಿಷಯವಾಗಿ ಬಹಳ ಕುತೂಹಲವುಂಟಾಗಿರುವುದಲ್ಲದೆ, ಈಗಾಗಲೇ ಅನೇಕರು ಇವುಗಳ ಅನುಕರಣೆಯಿಂದ ತಮ್ಮ ಆಯುರಾರೋಗ್ಯಗಳನ್ನು ಉತ್ತಮಪಡಿಸಿಕೊಂಡಿರುವುದಲ್ಲದೆ, ಆಹಾರಕ್ಕೆ ತಳಪಾಯವಾದ ವ್ಯವಸಾಯ ಮತ್ತು ಪ್ರಾಣಿಗಳನ್ನು ಸಹ ಒಳ್ಳೆಯ ಸ್ಥಿತಿಗೆ ತಂದಿರುತ್ತಾರೆ.

ನಮ್ಮ ಶರೀರಕ್ಕೆ ಸಸಾರಜನಕಾಂಶ ಅಥವಾ ಸೇಂದ್ರಿಯಾಹಾರ, ಪಿಷ್ಟ ಮತ್ತು ಸಕ್ಕರೆ, ಮೇದಸ್ಸು, ಖನಿಜಗಳು, ನೀರು, ಜೀವಸತ್ವಗಳು ಅತ್ಯಗತ್ಯ ನಮ್ಮ ದಿನಚರಿಯ ಆಹಾರದಲ್ಲಿ ಇವುಗಳೆಲ್ಲವೂ ಒಂದು ನಿರ್ದಿಷ್ಟ ಪ್ರಮಾಣದಲ್ಲಿರಬೇಕು. ಇದು ವಯಸ್ಸು, ಕೆಲಸ, ಶರೀರ, ಪ್ರಕೃತಿ, ವಾಯುಗುಣ, ಲಿಂಗಬೇಧ ಮೊದಲಾದುವುಗಳಿಗನುಸಾರವಾಗಿ ವ್ಯತ್ಯಾಸವಾಗುತ್ತದೆ. ನಾವು ಎಷ್ಟೇ ಆಹಾರ ಪದಾರ್ಥಗಳನ್ನು ಸೇವಿಸಿದರೂ ಸಹ ಅವು ಪಚನವಾಗುವ ಕಾಲದಲ್ಲಿ, ದೇಹಕ್ಕೆ ಉಷ್ಣ ಕೊಡುವಭಾಗ, ಮಾಂಸವೃದ್ಧಿಮಾಡುವ ಭಾಗ, ಎಲಬು, ಮೇದಸ್ಸಿಗೆ ಬಲಕೊಡುವ ಭಾಗ, ಕರಳುಗಳನ್ನು ಶುದ್ಧವಾಗಿಟ್ಟು ತನ್ಮೂಲಕ

ನರಗಳನ್ನು ಆರೋಗ್ಯವಾಗಿಡುವ ಭಾಗ, ರಕ್ತವನ್ನು ಶುದ್ಧವಾಗಿಡುವ ಭಾಗ, ನೀರು ಕ್ಷಾರ ಮೊದಲಾಗಿ ವಿಭಾಗಗಳಗುತ್ತವೆಯೆಂದು ನಿರ್ಧರಿಸಲ್ಪಟ್ಟಿದೆ. ದವಸ ಧಾನ್ಯಗಳು, ಹಾಲು, ತರಕಾರಿ, ಹಣ್ಣುಗಳು, ಮೊಟ್ಟೆಗಳು, ಮಾಂಸ ಮೀನುಗಳು ಮೊದಲಾದುವುಗಳನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಸೇವಿಸುವುದರಿಂದ ನಮ್ಮ ಶರೀರ ಪೋಷಣೆಗೆ ಅತ್ಯಾವಶ್ಯಕವಾದ ಸಾಮಗ್ರಿಗಳು ಸುಲಭವಾಗಿ ಒದಗಿ ಆಯುರಾರೋಗ್ಯವು ಹೆಚ್ಚುತ್ತದೆಯೆಂದು ತಿಳಿದು ಬಂದಿದೆ.

ಆದರೆ ನಾಗರೀಕತೆಯ ಮತ್ತು ಆಹಾರ ವಿಜ್ಞಾನದ ತವರೂರಾದ ಭಾರತದಲ್ಲಿ ಎಷ್ಟೋ ಹಿಂದೆಯೇ ಆಹಾರವನ್ನು ಸೇಂದ್ರಿಯ, ನಿರೀಂದ್ರಯ ಎಂಬ ಮುಖ್ಯ ಭಾಗಗಳಗಿಯೂ, ಪುನಃ ಆಪ್ಯ, ತೈಜಸ, ವಾಯವ್ಯ, ಆಕಾಶೀಯ, ಪಾರ್ಥೀವ ಎಂದು ಐದು ಭಾಗವಾಗಿಯೂ ವಿಂಗಡಿಸಿದ್ದರು. ಇದನ್ನೆಲ್ಲಾ ಚೆನ್ನಾಗಿ ತಿಳಿದಿದ್ದುದರಿಂದಲೇ ಅವರು ವ್ಯವಸಾಯ ಮತ್ತು ಪಶುಪಾಲನೆಯಲ್ಲಿ ಹೆಚ್ಚು ಮಮತೆಯನ್ನಿಟ್ಟು, ಉತ್ತಮ ಆಹಾರವನ್ನು ಸೇವಿಸುವ ಅವಕಾಶವನ್ನು ಕಲ್ಪಿಸಿಕೊಂಡು, ದೀರ್ಘಜೀವಿಗಳಾಗಿ, ಬಲ, ತೇಜಸ್ಸುಗಳೊಡನೆ ಕೂಡಿ ತಮ್ಮ ಬುದ್ಧಿಶಕ್ತಿಗಳಿಂದ ಮಾನವ ಸಮಾಜದೋನ್ನತಿಗೆ ಅತ್ಯವಶ್ಯಕವೂ, ಅಮೂಲ್ಯವೂ ಆದ ಎಷ್ಟೋ ಕೆಲಸಗಳನ್ನು ಮಾಡಿರುವುದಲ್ಲದೆ, ಎಷ್ಟೋ ವಿಷಯಗಳ ಸಂಗ್ರಹವನ್ನು ಮಾಡಲು ಸಾಧ್ಯವಾಯಿತು. ಆಗ ಕಾಡುಗಳು ಬೇಕಾದಷ್ಟಿದ್ದುದರಿಂದ ಪಶುಪಾಲನೆಗೂ ಮತ್ತು ಹಣ್ಣು ಹಂಪಲುಗಳಿಗೂ ಕೊರತೆಯಿರಲಿಲ್ಲ. ಆದರೆ ಈಗ ಸ್ಥಿತಿಗತಿಗಳು ಏರುಪೇರಾಗಿರುವುದರಿಂದ ತೊಂದರೆಗಳು ಬಹಳವಾಗಿ ತಲೆದೋರಿವೆ. ಮಾನವ ಸಮಾಜದ ಹೀನಸ್ಥಿತಿಗೆ ಯಂತ್ರಗಳು ಕಾರಣವೆಂಬುದನ್ನು ತಿಳಿದೇ ಅವರು, ಯಂತ್ರಗಳನ್ನು ಬಳಕೆಗೆ ತರಲೆತ್ನಿಸಲಿಲ್ಲವೆಂಬುದೇ ಅನೇಕರ ಅಭಿಪ್ರಾಯವಾಗಿದೆ. ಇದು ಒಪ್ಪತಕ್ಕ ಸಂಗತಿಯಾಗಿದೆ.

ನಮ್ಮ ದೇಶದಲ್ಲಿ ಶೇಕಡ ೮೦ ಜನ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಪ್ರಪಂಚದ ಪ್ರಸಿದ್ಧ ವ್ಯವಸಾಯ ದೇಶಗಳಿಗಿಂತಲೂ ಹೆಚ್ಚು ವಿಸ್ತೀರ್ಣದಲ್ಲಿ ಸಾಗುವಳಿಯಾಗುತ್ತಿದ್ದರೂ, ಜನಸಂಖ್ಯೆ ಪ್ರಪಂಚದ ೧/೫ ಭಾಗದಷ್ಟಿದ್ದರೂ ಸಹ ನಮ್ಮ ದೇಶದಲ್ಲಿ ೧/೩ ಭಾಗದಷ್ಟು ಜನ ಹೊತ್ತಿಗೆ ಸರಿಯಾಗಿ ಕೂಳಿಲ್ಲದೆ ಉಪವಾಸವಿರಬೇಕಾಗಿದೆ. ವಿಚಕ್ಷಣೆ ಇಲ್ಲದಿರುವುದರಿಂದ ನಮ್ಮ ದೇಶದಲ್ಲಿ ಆಗಾಗ ಕ್ಷಾಮಡಾಮರಗಳು ಪದಪದೇ ತಲೆದೋರುತ್ತಿವೆ. ದೇಶದ

ಸ್ಥಿತಿಗತಿಗಳನ್ನು ತಿಳಿದು ನಿವಾರಣೋಪಾಯಗಳನ್ನು ಸೂಚಿಸಲು, ಆಗಿಂದಾಗ್ಯೆ ನೇಮಕವಾದ ಕಮಿಟಿಗಳೆಲ್ಲವೂ ಏಕವಾಕ್ಯತೆಯಿಂದ, ನಿವಾರಣೋಪಾಯಗಳನ್ನು ಸೂಚಿಸಿದ್ದರೂ ಸಹ ನಮ್ಮ ಸ್ಥಿತಿ ಉತ್ತಮವಾಗದಿರುವುದು ಒಂದು ಶೋಚನೀಯಕರವಾದ ಸಂಗತಿಯೇ ಸರಿ.

ನಮ್ಮ ದೇಶದ ೨/೩ ಭಾಗದ ಜನರು ಉಪವಾಸವಿಲ್ಲದಿದ್ದರೂ ಸಹ, ಅವರ ಶರೀರಪೋಷಣೆಯು ತೃಪ್ತಿಕರವಾಗಿಲ್ಲ. ಏಕದಳ ಧಾನ್ಯಗಳಲ್ಲಿ ಯಾವುದೂ ಪರಿಪೂರ್ಣವಾದ ಆಹಾರವಲ್ಲ. ಹೀಗೆ ಧಾನ್ಯಗಳಲ್ಲಿ ಸ್ವಭಾವಸಿದ್ಧವಾಗಿಯೇ ಹುಟ್ಟಿಬಂದಿರುವ ಹೆಚ್ಚು ಕಡಿಮೆಗಳ ಜೊತೆಗೆ ಅವುಗಳನ್ನು ನಾನಾ ಬಗೆಯ ಸಂಸ್ಕಾರಗಳಿಗೆ ಒಳಪಡಿಸುವುದರಿಂದಲೂ ಮತ್ತು ಊಟಕ್ಕೆ ಸಿದ್ಧಪಡಿಸುವ ಕ್ರಮಗಳಲ್ಲಿರುವ ವೈವಿಧ್ಯದಿಂದಲೂ ಅವುಗಳ ಪೋಷಕ ಶಕ್ತಿಯು ಮತ್ತಷ್ಟು ಕುಗ್ಗುತ್ತದೆ. ರಜಪೂತ, ಪಠಾಣ, ಸಿಕ್ಕರು ಮೊದಲಾದವರು ಗೋಧಿಯನ್ನು ತಿಂದು ವಿಶೇಷವಾಗಿ ಹಾಲು ಕುಡಿಯುವುದಲ್ಲದೆ, ತರಕಾರಿ ಹಣ್ಣುಗಳನ್ನೂ ಧಾರಾಳವಾಗಿ ಉಪಯೋಗಿಸುವುದರಿಂದ ಅವರ ಶರೀರಕ್ಕೆ ಶಕ್ತಿಯನ್ನೂ, ಕಷ್ಟ ಸಹಿಷ್ಣುತೆಯನ್ನೂ ಕೊಡಬಲ್ಲ ಪೋಷಕಾಂಶಗಳೆಲ್ಲವೂ ಬೇಕಾದ ಆಹಾರ ದೊರೆಯುತ್ತವೆ. ಆದುದರಿಂದಲೇ ಅವರಲ್ಲನೇಕರು ಪ್ರಪಂಚದಲ್ಲೆಲ್ಲಾ ಬಹು ಸೊಗಸಾದ ಮಾನವವರ್ಗದಲ್ಲಿ ಸೇರಿರುವುದು.

ನಮ್ಮ ಇಂಡಿಯಾ ದೇಶದ ಆಯ ಭಾಗಗಳಲ್ಲಿ ರೂಢಿಯಾಗಿ ತಿನ್ನುವ ಆಹಾರದ ದರ್ಜೆಯು ಈ ರೀತಿಯಾಗಿದೆ.

೧. ಸಿಖ್ ೨. ಪಠಾಣ್ ೩. ಮರಾಠ ೪. ಘೂರ್ಕ ೫. ಕರ್ನಾಟಕ

೬. ಬಂಗಾಳಿ ೭. ಮದ್ರಾಸಿ

ನಮ್ಮ ದೇಶದ ಜನರಿಗೆ ಸರಾಸರಿ ಬೇಕಾಗತಕ್ಕ ದಿನಚರಿಯು ಆಹಾರವು ಯಾವ ರೀತಿ ಇರಬೇಕೆಂದೂ ಈಗ ಚಾಲ್ತಿಯಲ್ಲಿರುವ ಆಹಾರವು ಎಷ್ಟು ಕೀಳಾಗಿದೆಯೆಂಬುದನ್ನೂ ತೋರಿಸುವ ತಃಖ್ತೆ.

| ಆಹಾರ | ಪ್ರಮಾಣ | | |
| --- | --- | --- | --- |
| | ಚಾಲ್ತಿಯಲ್ಲಿರುವುದು | ಬೇಕಾಗಿರುವುದು | |
| | ಔನ್ಸ್‌ಗಳು | ಸಸ್ಯಾಹಾರಿಗಳಿಗೆ ಔನ್ಸ್‌ಗಳು | ಮಾಂಸಾಹಾರಿಗಳಿಗೆ ಔನ್ಸ್‌ಗಳು |
| ೧. ಧಾನ್ಯಗಳು | ೧೬ | ೨೦ | ೨೦ |
| ೨. ಬೇಳೆ | ೧ | ೩ | ೩ |
| ೩. ತರಕಾರಿ | ೨.೫ | ೧೨ | ೮ |
| ೪. ಹಣ್ಣುಗಳು | -- | ೨ | ೨ |
| ೫. ಜಿಡ್ಡು | ೫ | ೨ | ೧ |
| ೬. ಹಾಲು | ೧.೫ | ೮ | ೮ |
| ೭. ಸಕ್ಕರೆ | -- | ೨ | ೨ |
| ೮. ಮಾಂಸ ಮೀನು ಮೊಟ್ಟೆ | -- | -- | ೪ |
| ೯. ಇತರ ಸಂಬಾರದ ದಿನಸಿಗಳು | ೫ | -- | -- |
| ಇತರವಿಧವಾಗಿ ನಷ್ಟವಾಗುವುದನ್ನು ಕಳೆದರೆ | ೨೧ | ೪೬.೫ | ೪೫.೫ |

ಆಹಾರ ಪುಷ್ಟಿಯು ಕಡಿಮೆಯಾಗಿರುವುದರಿಂದಲೇ ಉಳಿದ ಇಂಡಿಯಾ ದೇಶದ ಜನರು ಕೀಳು ದರ್ಜೆಯ ಮಾನವನಾಗಿರುವುದು. ನಾವು ತಿನ್ನುವ ಆಹಾರದ ಪರಿಮಾಣು ಸಕ್ಕಷ್ಟಿಲ್ಲದೆ ಇರುವುದು ಅಥವಾ ಸಾಕಾದಷ್ಟು ಆಹಾರವನ್ನು ತೆಗೆದುಕೊಂಡರೂ ಅದರ ಗುಣಮಾತ್ರ ಕೀಳಾತಿರುವುದರ ಫಲವೇ, ವ್ಯಾಧಿಗಳು ಅಲ್ಪಾಯಸ್ಸು, ಸೋಮಾರಿತನ ಜಡತ್ತ್ವವೆನ್ನುವುದರಲ್ಲಿ ಸಂಶಯವಿಲ್ಲ.

ಅದರಲ್ಲೂ ಗ್ರಾಮಾಂತರಗಳಲ್ಲಿರುವ ಜನರ ಪಾಡಂತೂ ಬಹಳ ಶೋಚನೀಯಕರವಾಗಿದೆ. ಕಣದಲ್ಲಿ ದವಸಧಾನ್ಯಗಳನ್ನು ಒಕ್ಕಿ ನಜೂಕು ಮಾಡಿದ ನಂತರ ಕಣಕ್ಕೆ ಲಾಭವಾಗುವ ವಸ್ತುಗಳೆಂದರೆ ಧೂಳು, ಕೆಲಸಕ್ಕೆ ಬಾರದ ಮತ್ತು ಗೊಬ್ಬರಕ್ಕೆ ಯೋಗ್ಯವಾದ ಕಸಕಡ್ಡಿಗಳಲ್ಲವೆ? ರಸವತ್ತಾದ ದವಸ, ಧಾನ್ಯಗಳೆಲ್ಲಾ ಮನೆಗೆ ಸೇರುತ್ತವೆ. ಅದರಂತೆಯೇ ಹಳ್ಳಿಗಾಡುಗಳೆಲ್ಲಾ ಕಣವೆಂದು ಭಾವಿಸಿದರೆ ಹಳ್ಳಿಯ ಬೆಲೆಬಾಳುವ ರಸವತ್ತಾದ ಉತ್ತಮದರ್ಜೆಯ ಪದಾರ್ಥಗಳೆಲ್ಲಾ ಪಟ್ಟಣಗಳೇ ಮೊದಲಾದ ನಾಗರೀಕ ಕೇಂದ್ರಗಳೆನ್ನುವ ಮನೆಗಳಿಗೆ ಸೇರುತ್ತವೆ. ಹಳ್ಳಿಯವರು ರಸಬೆಳೆದು ಕಸ ತಿನ್ನಬೇಕಾಗಿದೆ. ಹಳ್ಳಿಯ ವಿದ್ಯಾವಂತರಾದಿಯಾಗಿ, ಉತ್ತಮದರ್ಜೆಯ ತರಕಾರಿ, ಹಣ್ಣುಗಳು, ಹಾಲು, ಮೊಟ್ಟೆ,

ಮಾಂಸ ಮೊದಲಾದುವುಗಳೆಲ್ಲವೂ ಕೊಳ್ಳುವ ಶಕ್ತಿ ಇರುವ ನಾಗರಿಕ ಕೇಂದ್ರಗಳೆಂದು ಭಾವಿಸಲ್ಪಟ್ಟಿರುವ ಪಟ್ಟಣಗಳ ಪಾಲಾಗುವುದನ್ನು ನೋಡಿದರೆ ಈಗಿನ ಸ್ಥಿತಿಯಲ್ಲಿ ಹಳ್ಳಿಯವರ ಸತ್ವವನ್ನು ಹೀರುವ ಕೇಂದ್ರಗಳೇ ನಾಗರಿಕ ಕೇಂದ್ರಗಳೆನ್ನಬಹುದು.

ಕೊಳ್ಳುವ ಶಕ್ತಿ ಇಲ್ಲದುದರ ಪರಿಣಾಮವಾಗಿ ರಸ ಬೆಳೆದರೂ ಕಸ ತಿನ್ನಬೇಕಾದ ಹೀನಸ್ಥಿತಿಗೆ ಇಳಿದು ಬಂದಿರುವ ಹಳ್ಳಿಯವರನ್ನು ಉತ್ತಮ ಸ್ಥಿತಿಗೆ ತರುವುದಕ್ಕಾಗಿ ಎಷ್ಟೋ ಕಾರ್ಯಕ್ರಮಗಳನ್ನೊಳಗೊಂಡಿರುವ ಯೋಚನೆಗಳಿಗೆ ಅಭಾವವಿಲ್ಲ. ಈಗಿನ ಸ್ಥಿತಿಗತಿಗಳಿಗೆ ಕಾರಣಗಳನ್ನು ಕಷ್ಟಪಟ್ಟು ತಿಳಿದುಕೊಳ್ಳದೆ ಗ್ರಾಮಸ್ಥರನ್ನು ಅಭಿವೃದ್ಧಿಗೆ ತರಲೆತ್ನಿಸುವುದು, ನೀರಿನಲ್ಲಿ ಮುಳಗಿ ಸಾಯುವವನು ತೇಲಾಡುವ ಹುಲ್ಲನ್ನು ಹಿಡಿದು ಬದುಕಲೆತ್ನಿಸಿದಂತೆಯೆ ಸರಿ ಗ್ರಾಮಗಳಲ್ಲಿ ಅಲ್ಪ ತೃಪ್ತಿ ಇದೆ. ಏನೋ ಭೂಮಿಯ ಮೇಲೆ ಹುಟ್ಟಿದ್ದಕ್ಕೆ ಎರಡು ದಿನ ಕಾಲ ನೂಕಿ ಕಣ್ಣು ಮುಚ್ಚಿಕೊಂಡರಾಯ್ತು. ಈ ಒದ್ದಾಟಗಳ್ಯಾತಕ್ಕೆ ಎಂಬ ಭಾವನೆ ತಾಂಡವಾಡುತ್ತಿದೆ. ಈ ಭಾವನೆಗಳು ಬರಲು ಬಡತನವೇ ಕಾರಣವೋ? ಅಥವಾ ಆಹಾರವೇ ಕಾರಣವೋ? ಅಥವಾ ಇವುಗಳ ಪರಿಣಾಮವೇ ಜಡತ್ವವೋ ಯೋಚಿಸಬೇಕಾಗಿದೆ.

ನಮ್ಮ ದೇಶದಲ್ಲಿ ಈಗ ಪ್ರಪಂಚದ ದನಕರುಗಳ ಪೈಕಿ ೧/೩ ಭಾಗವಿದ್ದರೂ ಕರಾವು ೧/೧೦ ಭಾಗಕ್ಕಿಂತಲೂ ಕಡಿಮೆಯಾಗಿದೆ. ಈಗ ೧/೫ ಭಾಗದ ಜನರು ಮಾತ್ರ ಹಾಲನ್ನು ಉಪಯೋಗಿಸುತ್ತಿದ್ದಾರೆ. ಹಾಗೆ ಉಪಯೋಗಿಸತಕ್ಕವರೆಲ್ಲಾ ಪಟ್ಟಣದವರೆಂದರೆ ಅತಿಶಯೋಕ್ತಿಯಾಗಲಾರದು. ಪಟ್ಟಣಗಳಲ್ಲಿ ಶೇಕಡ ೩.೨ರಷ್ಟು ಹಸುಗಳು ಮತ್ತು ಶೇಕಡ ೫ಕ್ಕಿಂತಲೂ ಕಡಿಮೆಯಾಗಿ ಎಮ್ಮೆಗಳೂ ಇರುತ್ತವೆ. ಶೇಕಡ ೮೩ರಷ್ಟು ಹಾಲನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಮಾರಾಟ ಮಾಡುತ್ತಿರುವುದೇ ಹಳ್ಳಿಯವರ ಹಣೆಯ ಬರಹವಾಗಿದೆ. ನಮ್ಮ ದೇಶದ ಜನರು ಸರಾಸರಿ ೧ ರಿಂದ ೬ ಔನ್ಸ್ ಮಾತ್ರ ಹಾಲನ್ನು ಉಪಯೋಗಿಸುತ್ತಿದ್ದರೆ, ಅದೇ ಪರದೇಶದವರು ಸರಾಸರಿ ४೦ ಔನ್ಸ್‌ಗಳ ಮೇಲೆ ಹಾಲನ್ನು ಉಪಯೋಗಿಸುತ್ತಿದ್ದಾರೆ. ಹಾಲಿನ ಅಭಾವದ ದೆಶೆಯಿಂದ ಪ್ರತಿ ವರ್ಷವೂ ೫-೬ ಲಕ್ಷ ಮಣಗಳಷ್ಟು ಇಂಗಿಸಿದ ಕೆನೆತೆಗೆದ ಹಾಲಿನ ಪುಡಿಗಳು ನಮ್ಮ ದೇಶದೊಳಕ್ಕೆ ಬರುತ್ತಿದ್ದರೂ ಸಹ, ನಮ್ಮ ದೇಶದಿಂದ ಹಾಲಿನ ವಸ್ತುಗಳು ಪರದೇಶಗಳಿಗೆ ರಫ್ತಾಯಿತೆಂದರೆ, ಅದಕ್ಕಿಂತಲೂ ನಾಚಿಕೆಗೇಡಾದ ಸಂಗತಿ ಬೇರೊಂದಿರಲಾರದು. ಇಂಡಿಯಾ ದೇಶದಲ್ಲಿ

ಒಂದೊಂದು ದನ ಸರಾಸರಿ ೨ ಪೌಂಡು ಹಾಲು ಕರೆದರೆ, ಇಂಗ್ಲೆಂಡ್ ದೇಶದಲ್ಲಿ ಒಂದು ರಾಸು ೧೬ ಪೌಂಡು ಕರೆಯುತ್ತಿದೆ. ಇಂತಹ ಹೀನಸ್ಥಿತಿಯಲ್ಲಿ ನಾವಿದ್ದರೂ ಸಹ, ನಮ್ಮ ದೇಶದಲ್ಲಿ ಪ್ರತಿ ನಿಮಿಷಕ್ಕೂ ಒಂದೊಂದು ದನ ಹೊರಗಡೆ ಹೋಗುತ್ತಿರುವುದಲ್ಲದೆ, ಪ್ರತಿ ನಿಮಿಷವೂ ೫ ದನಗಳು ಕೊಲ್ಲಲ್ಪಡುತ್ತಿವೆ ಎಂದು ಬುದ್ಧಿವಂತರು ಲೆಕ್ಕಹಾಕಿದ್ದಾರೆ.

ಹಾಲಿನಲ್ಲಿ ೧೦೧ ವಸ್ತುಗಳು ತಕ್ಕ ಪರಿಮಾಣದಲ್ಲಿದ್ದು, ಶರೀರ ಪೋಷಣೆಗೆ ಶ್ರೇಷ್ಠವಾದ ಆಹಾರವಾಗಿರುವುದಲ್ಲದೆ ರೋಗಿಷ್ಟರಿಗೂ ಮತ್ತು ಮಕ್ಕಳಿಗೂ ಅಮೃತಪ್ರಾಯವಾಗಿದೆ. ಹಸುವಿನ ಹಾಲೇ ಸರ್ವಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಇದನ್ನೆಲ್ಲಾ ಚೆನ್ನಾಗಿ ಅರಿತೇ ನಮ್ಮ ಪೂರ್ವಿಕರು ಗೋ ಪೂಜೆಯನ್ನು ಮಾಡುತ್ತಿದ್ದರೆನ್ನಬಹುದು. ಆದರೆ ಈಗ ಗೋ ಪೂಜೆಗೆ ಬದಲಾಗಿ ಗೋ ಹತ್ಯೆ ರೂಢಿಗೆ ಬಂದಿರುವುದಲ್ಲದೆ ಸಗಣಿ ಗಂಜಲಗಳೊಡನೆಯೂ ಮತ್ತು ಇನ್ನೂ ಅನೇಕ ಬಗೆಯ ಅಪಾಯಕರವಾದ ಕ್ರಿಮಿಗಳು, ಕಶ್ಮಲಗಳಿಂದಲೂ ಕೂಡಿದ ಹಾಲನ್ನು ಕುಡಿಯುವುದಲ್ಲದೆ, ಹಾಲಿಗೆ ವಿಷಗಳನ್ನು ಸೇರಿಸಿ ಕುಡಿಯುವ ಕೆಟ್ಟ ರೂಢಿ ಬಂದಿರುವುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಯಾರು ಮೊಟ್ಟ ಮೊದಲೇ ಹಾಲನ್ನು ಅಮೃತವೆಂದು ಕರೆದರೊ, ಅವರ ಸಂತಾನಕ್ಕೆ  ಹಾಲೇ ಇಲ್ಲದಂತಾಗಿರುವುದು ಬಹಳ ಅನ್ಯಾಯ. ಮೇಕೆಗಳ ಹಾಲು ಕೂಡಾ ಬಹಳ ಒಳ್ಳೆಯದೇ ಹೌದು. ಆದರೆ ಹಾಲಿಗಾಗಿ ಮೇಕೆಗಳನ್ನು ಸಾಕುವ ರೂಢಿ ನಮ್ಮ ದೇಶದಲ್ಲಿ ಚಾಲ್ತಿಯಲ್ಲಿ ಇಲ್ಲದಿರುವುದರಿಂದಲೇ ಕ್ಷಯರೋಗ ನಿವಾರಣೆಗೊಂದು ದೊಡ್ಡ ಆತಂಕವಾಗಿದೆ.

ಕಳೆದ ವರ್ಷದಲ್ಲಿ ಇಂಗ್ಲೆಂಡ್ ದೇಶದಲ್ಲಿ "ಹೆಚ್ಚು ಹಾಲನ್ನು ಕುಡಿಯಿರಿ" ಎನ್ನುವ ಪ್ರಚಾರಕ್ಕೇ, ೭೫ ಲಕ್ಷ ರೂಪಾಯಿಗಳು ಖರ್ಚು ಮಾಡಿರುವಾಗ, ನಮ್ಮ ದೇಶದಲ್ಲಿ ಇದರ ಸೊಲ್ಲೇ ಇಲ್ಲದಿರುವುದು ನಮ್ಮ ಹೀನಸ್ಥಿತಿಯನ್ನು ತೋರಿಸುವ ಹೆಗ್ಗುರುತಾಗಿದೆ.

ನಮ್ಮ ದೇಶದ ಜನರನ್ನು ಅಭಿವೃದ್ಧಿಗೆ ತರಲು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದೇನೋ ಮುಖ್ಯ. ಸಂಪಾದನಾ ಶಕ್ತಿಯೇ ಎಲ್ಲಾ ಸಾಹಸಗಳಿಗೂ ಮೂಲ ಆದರೆ ಶರೀರ ಪೋಷಣೆಯಿಲ್ಲದೆ ಎಷ್ಟು ಸಂಪಾದಿಸಿದರೂ ಪ್ರಯೋಜನವೂ ಇಲ್ಲ. ಮತ್ತು ಹಾಗೆ ಸಂಪಾದಿಸಲೂ ಸಾಧ್ಯವಿಲ್ಲ. ಹೊತ್ತಿಗೆ ಸರಿಯಾಗಿ ಊಟಕ್ಕೇ ಸೊನ್ನೆಯಾಗಿರುವಾಗ

ಪುಷ್ಟಿಕರವಾದ ಆಹಾರವೆಲ್ಲಿಂದ ಬರಬೇಕು? ಎಲ್ಲಾ ಜನರ ಸಂಪಾದನಾ ಶಕ್ತಿಯೂ ಒಂದೇ ಸಾರಿ ಹೆಚ್ಚುವುದಿಲ್ಲ. ಈಗ ಇರುವಂತೆಯೇ ಎಲ್ಲರ ಸಂಪಾದನಾ ಶಕ್ತಿಯನ್ನು ಹೆಚ್ಚಿಸುವುದರಿಂದಲೇ ಎಲ್ಲರ ಸ್ಥಿತಿಯೂ ಉತ್ತಮಗೊಳ್ಳುತ್ತದೆಯೆಂದರೆ ಒಪ್ಪತಕ್ಕದ್ದಲ್ಲ. ಈತಿನ ಸ್ಥಿತಿಯಲ್ಲಿ ಐಶ್ವರ್ಯವಂತರು ಕುಬೇರರಾಗಲು, ಬಡವರು ಕಡುಬಡವರಾಗಲು ಅವಕಾಶವಿದೆ. ಬಡವರ ನಷ್ಟವೇ ಐಶ್ವರ್ಯವಂತರ ಲಾಭವಾಗಿದೆ. ಯುದ್ಧಕ್ಕೆ ಮುಂಚೆ ನಮ್ಮ ದೇಶದ ಪ್ರತಿಯೊಬ್ಬರ ತಿಂಗಳ ಸರಾಸರಿ ಸಂಪಾದನೆ ೫-೭-೦ ಉತ್ತಮವಾದ ಪೋಷಣೆಗೆ ತಕ್ಕ ಆಹಾರಕ್ಕಾಗಿ ೪ ರಿಂದ ೬ ರೂಪಾಯಿಗಳು ಬೇಕಾಗಿದ್ದಿತು. ಒಟ್ಟಿನಲ್ಲಿ ೩/೪ ಭಾಗಕ್ಕಿಂತಲೂ ಹೆಚ್ಚಾಗಿಯೇ ಆಹಾರಕ್ಕೆ ಖರ್ಚು ಮಾಡಬೇಕಲ್ಲದೆ, ಕೆಲವು ಸಂದರ್ಭಗಳಲ್ಲಿ ಆಹಾರಕ್ಕೇ ಸಾಕಾಗುವಷ್ಟು ವರಮಾನವಿಲ್ಲದಂತಾಗುತ್ತದೆ. ಆದರೆ ಪ್ರತಿಯೊಬ್ಬನೂ ಇತರ ಅವಶ್ಯಕತೆಗಳಿಗಾಗಿ ಖರ್ಚು ಮಾಡಬೇಕಾಗಿರುವುದರಿಂದ ಆಹಾರಕ್ಕಾಗಿ ಖರ್ಚು ಮಾಡುವುದನ್ನು ತಗ್ಗಿಸಬೇಕಾಗಿದೆ. ನಮ್ಮ ದೇಶದಲ್ಲಿ ಕಷ್ಟಪಡತಕ್ಕವರಿಗೆ ನ್ಯಾಯವಾಗಿ ಹೆಚ್ಚು ಆಹಾರಬೇಕಾಗಿದ್ದರೂ ಸಹ ಕಡಿಮೆ ಆಹಾರ ಸಿಕ್ಕುವಂತಾಗಿರುವುದು, ಅವರ ಅಲ್ಪ ಸಂಪಾದನೆಯೊಂದರಿಂದಲೇ ಅಲ್ಲದೆ, ವ್ಯಾಪಾರ, ಕೈಗಾರಿಕೆ, ವ್ಯವಸಾಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳದಿರುವುದರಿಂದ ಬಡವರು ಕೊಂಡುಕೊಳ್ಳತಕ್ಕ ವಸ್ತುಗಳನ್ನು ಅಕ್ರಮ ಲಾಭಕೋರರು ತಮ್ಮ ಇಷ್ಟದಂತೆ ಮಾರಾಟಮಾಡುತ್ತಿರುವುದರಿಂದಲೂ ಮತ್ತು ಬಡವರು ಮಾರಾಟ ಮಾಡತಕ್ಕ ವಸ್ತುಗಳನ್ನು ದಳ್ಳಾಳಿಗಳು ಕೀಳು ಬೆಲೆಗೆ ಕೊಂಡುಕೊಳ್ಳುವ ಅಕ್ರಮ ರೂಢಿ ಆಚರಣೆಯಲ್ಲಿರುವುದರಿಂದಲೂ, ಕಾರಣವಾಗಿದೆ. ದೇಶದಲ್ಲಿರುವವರೆಲ್ಲರ ಹಿತಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಯಾವ ಕೆಲಸವನ್ನೇ ಆಗಲಿ ರಾಷ್ಟ್ರೀಯ ಪರಿಮಾಣದಲ್ಲಿ ಕೈಗೊಂಡರೆ ಉತ್ತಮ ಫಲಿತಾಂಶಗಳು ದೊರೆಯುವುದರಲ್ಲಿ ಸಂಶಯವಿಲ್ಲ.

ನಮ್ಮ ದೇಶದಲ್ಲಿರುವ ನಾನಾ ಸರ್ಕಾರದ ಕ್ಷೇತ್ರಗಳಲ್ಲಿ ಆಯಾ ಕಸಬು ಉಪಕಸಬುಗಳಿಗೆ ತಕ್ಕಂತೆ ಹೆಚ್ಚು ಉತ್ಪತ್ತಿ ಬರುತ್ತಿದ್ದರೂ, ದೇಶದಲ್ಲೆಲ್ಲಾ ಅದೇ ರೀತಿಯಾಗಿಲ್ಲದಿರುವುದು ಎಲ್ಲರಿಗೂ ತಿಳಿದ ಅಂಶವೇ ಆಗಿರುತ್ತೆ. ಈಗ ನಮ್ಮ ದೇಶದಲ್ಲಿ ಈ ಕೆಳಗೆ ಕಂಡ ರೀತಿ ಆಹಾರ ವಸ್ತುಗಳು ಉತ್ಪತಿಯಾಗುತ್ತಿವೆ.

## ಆಹಾರದ ವಸ್ತುಗಳು

| | ಉತ್ಪತ್ತಿ (ಲಕ್ಷ ಟನ್‌ಗಳಲ್ಲಿ) | ಬೇಕಾದುದು (ಲಕ್ಷ ಟನ್‌ಗಳಲ್ಲಿ) | ಸಾಲದೆ ಇರುವುದು (ಲಕ್ಷ ಟನ್‌ಗಳಲ್ಲಿ) |
|---|---|---|---|
| ಧಾನ್ಯಗಳು | ೫೩೪ | ೬೧೧ | ೭೭ |
| ಬೇಳೆ | ೭೫ | ೯೩ | ೧೮ |
| ಹಾಲು | ೬೩ | ೩೨೦ | ೨೫೭ |
| ಹಣ್ಣು | -- | ೬೦ | ೬೦ |
| ತರಕಾರಿ | ೯೦ | ೧೮೦ | ೯೦ |
| ಮೊಟ್ಟೆಗಳು | ೩೩,೦೦೦ ಲಕ್ಷ ಮಾತ್ರ | -- | -- |
| ನೆಲಗಡಲೆ | ೨೦ | -- | -- |
| ಸಕ್ಕರೆ | ೫೦ | -- | -- |
| ಮಾಂಸ | ೧೦ | -- | -- |
| ಮೀನು | ೬.೭ | -- | -- |

ಹಾಲಿ ಈಗ ರೈತರ ವಶದಲ್ಲಿರುವ ಜಮಿನುಗಳಲ್ಲಿ ಉತ್ತಮ ವಿಧಾನಗಳನ್ನು ಮತ್ತು ಸಾಧನಗಳನ್ನು ಉಪಯೋಗಕ್ಕೆ ತರುವುದಲ್ಲದೆ, ಉತ್ತಮವಾದ ಬಿತ್ತನೆಯನ್ನು ಉಪಯೋಗಿಸಲೆತ್ನಿಸಿದರೆ ಶೇಕಡ ೧೫ ರಷ್ಟು ಉತ್ಪತ್ತಿ ಹೆಚ್ಚುತ್ತದೆಯೆಂದು ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಉತ್ತಮವಾದ ಗೊಬ್ಬರದಿಂದ ಶೇಕಡ ೩೦ ರಷ್ಟು ಹೆಚ್ಚಾಗಿ ಫಸಲು ಬರುವುದಲ್ಲದೆ ಸರಿಯಾದ ನೀರಿನ ವ್ಯವಸ್ಥೆ ಏರ್ಪಟ್ಟರೆ ಶೇಕಡ ೫೦ ರಷ್ಟು ಉತ್ಪತ್ತಿಯನ್ನು ಹೆಚ್ಚಿಸಬಹುದಾಗಿರುತ್ತೆ. ಹೊಸದಾಗಿ ಜಮೀನುಗಳನ್ನು ಬೇಸಾಯಕ್ಕೆ ತರುವುದರಿಂದಲೂ ಉತ್ಪತ್ತಿಯನ್ನು ಹೆಚ್ಚಿಸಬಹುದಾಗಿರುತ್ತೆ.

ನಮ್ಮ ದೇಶದಲ್ಲಿ ಆಹಾರದ ಕೊರತೆಯ ಜೊತೆಗೆ, ಆರೋಗ್ಯದ ನಿಯಮಗಳು ತಿಳಿಯದೇ ಇರುವುದು, ಬಾಲ್ಯವಿವಾಹ, ಅಂಟುಜಾಡ್ಯಗಳು, ಮೊದಲಾದುವುಗಳಿಂದಲೂ ಬಹಳ ಕೆಟ್ಟ ಪರಿಣಾಮಗಳುಂಟಾಗುತ್ತವೆ.

ನಮ್ಮ ದೇಶದಲ್ಲಿ ೧೦೦೦ಕ್ಕೆ ೧೬೨ ಮಕ್ಕಳು ಚಿಕ್ಕ ಮಯಸ್ಸಿನಲ್ಲಿಯೇ ಸಾಯುತ್ತಿದ್ದಾರೆ. ಅದೇ ಇಂಗ್ಲೆಂಡ್ ದೇಶದಲ್ಲಿ ೧೦೦೦ಕ್ಕೆ ೫೮ ಮಕ್ಕಳು ಮಾತ್ರ ಸಾಯುತ್ತಿದ್ದಾರೆ. ಬಾಣಂತಿಗಳ

ಮರಣದ ಸಂಖ್ಯೆ ನಮ್ಮ ದೇಶದಲ್ಲಿ ೧೦೦೦ಕ್ಕೆ ೨೪. ಇಲ್ಲಿನ ಸರಾಸರಿ ಆಯಸ್ಸು ೨೭ ವರ್ಷವಾದರೆ, ಇಂಗ್ಲೆಂಡ್‌ನಲ್ಲಿ ೬೨ ವರ್ಷ. ಮರಣದ ಸಂಖ್ಯೆ ಇಲ್ಲಿ ೧೦೦೦ಕ್ಕೆ ೨೨–೪ ಆದರೆ ಇಂಗ್ಲೆಂಡ್‌ನಲ್ಲಿ ೧೨–೪ ಇಂತಹ ಕೀಳು ಸ್ಥಿತಿಯಲ್ಲಿಗೆ ಇಳಿದಿದ್ದರೂ ಸಹ, ಹಾಲಿ ಇರತಕ್ಕವರಿಗೆ ಆಹಾರವನ್ನು ಒದಗಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದೇವೆ. ಇನ್ನು ಹೆಚ್ಚುತ್ತಿರುವ ಜನಸಂಖ್ಯೆಗೆ ಒದಗಿಸಿಕೊಳ್ಳಲು ಈಗಿನ ಸ್ಥಿತಿಯಲ್ಲಿ ಅಸಾಧ್ಯವೇ ಸರಿ. ಅಂದ ಮೇಲೆ ಮುಂದಿನ ಪೀಳಿಗೆಯು ಏಳಿಗೆಯಾಗುವ ಬಗೆಯಾದರೂ ಹೇಗೆ? ಆದುದರಿಂದ ನಾವು ಎಷ್ಟೆಷ್ಟು ಪ್ರಯತ್ನಗಳಿಂದ ನಮ್ಮ ಆಹಾರದ ಕೊರತೆಯನ್ನು ಸರಿಪಡಿಸಿಕೊಳ್ಳಬೇಕೆಂಬುದನ್ನು ಪ್ರತಿಯೊಬ್ಬರೂ ಗಮನಿಸಬೇಕಾಗಿದೆ.

ನಮ್ಮ ಸಂಸ್ಥಾನದಲ್ಲಿಯೂ ವ್ಯವಸಾಯದ ಕಸಬು ಈಗ ಅನೇಕರಿಗೆ ಸೊಗಸುವುದಿಲ್ಲ. ಚಿಕ್ಕ ಹಿಡುವಳಿಗಳು, ಅಲ್ಪ ಆದಾಯದ ವರ್ಷಗಾಲ ಎಡಬಿಡದೆ ಕೆಲಸವಿಲ್ಲದಿರೋಣ ಇವುಗಳೇ ಈ ಸ್ಥಿತಿಗೆ ಕಾರಣಗಳು ರೈತರು ನಿರಕ್ಷರಕುಕ್ಷಿಗಳಾಗಿರುವುದರಿಂದಲೂ, ಬಡತನದಿಂದಲೂ, ತಂದೆ ಮಕ್ಕಳು ಬೇರೆಯಾಗಿರುವ ಸ್ಥಿತಿಗಿಳಿದಿರುವುದರಿಂದಲೂ, ಕೂಲಿಯಾಳುಗಳ ಅಭಾವದಿಂದ ಕೆಲಸಗಳನ್ನು ನೆರವೇರಿಸುವುದು ಅಸಾಧ್ಯವಾಗಿ ಪರಿಣಮಿಸಿರುವುದರಿಂದಲೂ, ತಮ್ಮ ತಮ್ಮ ಕೆಲಸಗಳನ್ನು ಕ್ರಮಪಡಿಸಿಕೊಳ್ಳುವ ಶಕ್ತಿಇಲ್ಲದುದರಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ, ಸುಧಾರಿಸಿದ ವಿಧಾನಗಳನ್ನು ಅನುಸರಿಸಲು ಸಾಧ್ಯವಿಲ್ಲವಾಗಿದೆ.

ನಮ್ಮ ದೊಡ್ಡ ದೊಡ್ಡ ಜಮೀನುದಾರರೆಲ್ಲರೂ, ಜನಜೀವನ ಮತ್ತು ಆರೋಗ್ಯವನ್ನು ಏರುಪೇರುಮಾಡದಂತೆ ನೋಡಿಕೊಂಡು, ಯಂತ್ರಗಳನ್ನು ತಮ್ಮ ಕೆಲಸಗಳಿಗೆ ಉಪಯೋಗಿಸಿಕೊಂಡು, ವ್ಯವಸಾಯವನ್ನು ಉತಮ ಸ್ಥಿತಿಗೆ ತಂದು ಕೊಂಚಮಟ್ಟಿಗೆ ಆಹಾರದ ಕೊರತೆಯನ್ನು ನೀಗಬಹುದು.

ಆದರೆ ಎಲ್ಲಾ ಸಾಮಾನ್ಯ ರೈತರೂ ಅವರನ್ನು ಅನುಸರಿಸಲು ಈಗಿನ ಸ್ಥಿತಿಯಲ್ಲಿ ಅಸಾಧ್ಯವಾಗಿರುವುದಲ್ಲದೆ ಹೆಚ್ಚು ಯಂತ್ರಗಳ ದೆಸೆಯಿಂದ ಬಹಳ ಹೀನಸ್ಥಿತಿಗೆ ಇಳಿಯುವ ಸೂಚನೆಗಳೂ ಇವೆ. ದಿಕ್ಕೆಟ್ಟು, ಮನಸ್ಸಿಗೆ ಬಂದ ಯೋಚನೆಗಳಿಂದಲೂ, ಆಚರಣೆಗಳಿಂದಲೂ ನಮ್ಮ ಸಮಾಜವನ್ನು ಕೀಳು ಸ್ಥಿತಿಗೆ ತರುವುದು ಖಂಡಿತವಾಗಿಯೂ ಸರಿಯಲ್ಲವೆಂಬುದು

ಈಗಾಗಲೇ ನಮಗೆಲ್ಲಾ ತಿಳಿದು ಬಂದಿದೆ. ಈಗಿನ ಸ್ಥಿತಿಯನ್ನು ಉತ್ತಮಪಡಿಸಲು, ಹಿಂದಿನ ಐಕಮತ್ಯ ಸಂಘ ಬಲವನ್ನು ಪುನರುದ್ಧಾರ ಮಾಡಬೇಕು. ಈಗ ಕಾರಣಾಂತರದಿಂದ, ಕಾಲ, ಶ್ರಮ, ಹಣಗಳೆಲ್ಲವೂ ವ್ಯಥಾ ವ್ಯಯವಾಗುತ್ತಿರುವುದರಿಂದಲೇ ಅಭಿವೃದ್ಧಿಗೆ ಆತಂಕವುಂಟಾಗಿದೆ. ಪ್ರತಿ ಗ್ರಾಮದ ಕೆಲಸವನ್ನೂ ಸಂಘ ಶಕ್ತಿಯನ್ನು ಉಪಯೋಗಿಸಿಕೊಂಡು ಬಹಳ ಸುಲಭವಾಗಿ ನೆರವೇರಿಸಬಹುದಲ್ಲದೆ, ಎಷ್ಟೋ ಹಣ, ಕಾಲ, ಶ್ರಮಗಳನ್ನು ಮಿತಗಾಯ ಮಾಡಿ, ಎಷ್ಟೋ ಕೈಗಾರಿಕೆಗಳನ್ನು ಕೈಗೊಳ್ಳಬಹುದಾಗಿರುತ್ತೆ. ಹಿಂದಿನ ಸಂಘ ಶಕ್ತಿಯೂ ಮತ್ತು ನವೀನ ಸಹಕಾರ ತತ್ವಗಳೂ ತುಂಬಾ ಲಾಭದಾಯವಾಗಿರುವುದಲ್ಲದೆ, ಸಮಾಜದ ಶ್ರೇಯಸ್ಸಿಗೆ ತುಂಬಾ ಬೆಂಬಲ ಕೊಡುತ್ತವೆ. ಆದರೆ ಸಮತಾಭಾವನೆಗಳನ್ನು ಧಿಕ್ಕರಿಸುವುದು ನ್ಯಾಯವಾಗಿದೆ. ಅದರಿಂದ ವ್ಯಕ್ತಿ ಸ್ವಾತಂತ್ರ್ಯವು ಕ್ಷೀಣಿಸುವುದಲ್ಲದೆ, ಎಲ್ಲರ ಅಭಿವೃದ್ಧಿಗೂ ಆತಂಕವುಂಟಾಗುತ್ತದೆಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಈಗ ನಾವು ನೋಡುವಂತೆ ಪರದೇಶದವರ ಪದ್ಧತಿಗಳೆಲ್ಲಾ ಎಂತಹ ಕೆಟ್ಟ ಪರಿಣಾವಗಳನ್ನುಂಟುಮಾಡಿರುತ್ತವೆಂಬುದನ್ನು ನೋಡಿದರೆ, ನಮ್ಮ ಹಳೆಯ ಪದ್ಧತಿಗಳೇ ಎಷ್ಟೋ ಪಾಲು ಮೇಲೆಂಬುದು ಹೊಳೆಯದಿರಲಾರದು. ನಮ್ಮದೇ ಆದ ಒಂದು ವೈಶಿಷ್ಟ್ಯದಿಂದ ನಾವು ಮುಂದುವರಿಯಲೆತ್ನಿಸುವುದು ಉತ್ತಮವಾಗಿ ಕಂಡು ಬಂದಿದೆ ಇದರಲ್ಲಿ ಪರಪೀಡನೆಯ ವಾಸನೆಯೇ ಇರುವುದಿಲ್ಲ.

ಎಲ್ಲಾ ಗ್ರಾಮಗಳಲ್ಲೂ, ಜನರ ಹಿಡವಳಿಗಳನ್ನೆಲ್ಲಾ ಒಟ್ಟಿಗೆ ಗ್ರಾಮಸ್ಥರೆಲ್ಲರೂ ಸೇರಿ ಬೇಸಾಯಮಾಡಿ, ಬಂದ ಫಸಲನ್ನು ಎಲ್ಲರೂ ಸಮನಾಗಿ ಹಂಚಿಕೊಂಡು, ಅದಕ್ಕೆ ತಕ್ಕ ಜಮಾ ಖರ್ಚುಗಳನ್ನು ಮಾಡಿಕೊಂಡು ಇತರ ಉಪ ಕಸಬು, ಕೈಗಾರಿಕೆಗಳನ್ನು ಸಂಘ ಬಲದಿಂದಲೇ ನೆರವೇರಿಸಿಕೊಳ್ಳುವುದರ ಮೂಲಕ ಊರಿನ ಆಹಾರ ಸಮಸ್ಯೆಯನ್ನು ಬಗೆಹರಿಸಬಹುದಲ್ಲದೆ, ಇತರ ಅವಶ್ಯಕತೆಗಳನ್ನೂ ನಿರಾತಂಕವಾಗಿ ಪೂರೈಸಿಕೊಳ್ಳಬಹುದಾಗಿರುತ್ತೆ. ನಮ್ಮ ದೇಶದ ನಿರುದ್ಯೋಗಿಗಳಾದ ವಿದ್ಯಾವಂತರನ್ನು ಒಂದು ಕ್ಲುಪ್ತ ಸಂಖ್ಯೆಯಲ್ಲಿ ಪ್ರತಿ ಹೋಬಳಿಗಳಲ್ಲೂ ನೀರಾವರಿ ಅನುಕೂಲಗಳಿರುವ ಕಡೆಸೇರಿಸಿ, ಸಂಘಬಲದಿಂದಲೇ ಅಲ್ಲದೆ ಅವಶ್ಯಕವಿದ್ದರೆ ಯಂತ್ರಗಳನ್ನೂ ಉಪಯೋಗಿಸಿಕೊಂಡು ನವೀನ ಸಂಶೋಧಗಳ ರೀತಿ ವ್ಯವಸಾಯ ಮಾಡುವಂತೆಯೂ, ಜೊತೆಗೆ ಮಿಶ್ರ ವ್ಯವಸಾಯವನ್ನೂ ಅವಶ್ಯಕವಾದ ಕೈಗಾರಿಕೆಗಳನ್ನೂ ಕೈಗೊಳ್ಳುವಂತೆ ಏರ್ಪಡಿಸಿದರೆ ಹಿಂದಿನ ಸಂಘಶಕ್ತಿಯನ್ನು ಪುನರುದ್ಧಾರಮಾಡಿದಂತಾಗುವ

ೃದಲ್ಲದೆ ಇತರ ಗ್ರಾಮಸ್ಥರಿಗೆ ಪ್ರದರ್ಶಿಸಿದಂತಾಗುತ್ತದೆ. ಕ್ರಮೇಣ ಜನಸಾಮಾನ್ಯರೆಲ್ಲರೂ, ವಸಾಹತುಗಳಲ್ಲಿರುವ ತಮ್ಮಂತಹ ರೈತರೇ ಅನುಸರಿಸುತ್ತಿರುವ ಕ್ರಮಗಳನ್ನು, ಸುಲಭವಾಗಿ ಅನುಸರಿಸಲೆತ್ನಿಸುತ್ತಾರೆ. ಆದರೆ ವಸಾಹತುಗಳಿಗೆ ವಿದ್ಯಾವಂತರನ್ನು ಚುನಾಯಿಸುವಾಗ, ಅವರ ಅರ್ಹತೆಯನ್ನು ಗಮನಿಸುವುದಲ್ಲದೆ, ಸುಶಿಕ್ಷಿತರೂ ಯೋಗ್ಯರೂ ಆದವರನ್ನೇ ಆರಿಸಬೇಕು.

ನಮ್ಮ ದೇಶದಲ್ಲಿ "ಹೆಚ್ಚು ಆಹಾರ ಬೆಳೆಯಿರಿ" ಎಂಬುದನ್ನು, ಕೇವಲ ದವಸಧಾನ್ಯಗಳನ್ನು ಮಾತ್ರ ಬೆಳೆಯಬೇಕೆಂದು ಅರ್ಥಮಾಡಿಕೊಂಡಿರುವುದು ತುಂಬಾ ವಿಷಾದಕರವಾದ ಸಂಗತಿ. ಅದೇ "ಹುಚ್ಚು ಆಹಾರ ಬೆಳೆಯಿರಿ" ಎಂಬುದನ್ನು ಪರದೇಶಗಳಲ್ಲಿ ಮನುಷ್ಯನ ಮತ್ತು ದನಕರುಗಳ ಪುಷ್ಟಿಗೆ ಮೂಲವಸ್ತುಗಳಾದ ಧಾನ್ಯ, ತರಕಾರಿ, ಹಣ್ಣುಗಳು, ಮಾಂಸ, ಮೊಟ್ಟೆ, ಹಾಲು, ದನಕರುಗಳ ಮೇವು, ಕೈ ಮೇವುಗಳು ಮೊದಲಾದುವುಗಳನ್ನೆಲ್ಲಾ ಬೆಳೆಯುವುದೆಂದು ಅರ್ಥಮಾಡಿಕೊಂಡು, ನಾನಾ ಮುಖವಾಗಿ ಮುಂದುವರಿದಿರುವುದಲ್ಲದೆ ಉತ್ತಮ ಫಲಿತಾಂಶಗಳನ್ನು ಹೊಂದಿರುತ್ತಾರೆಂದು ತಿಳಿದು ಬಂದಿದೆ.

ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳನ್ನು, ಉತ್ಪತ್ತಿ ಮಾಡಲು ಎಷ್ಟು ಮಾತ್ರ ಸಾಧ್ಯವಿದೆ? ಹೆಚ್ಚಿಸಲು ಎಂತಹ ಸಹಾಯಗಳು ಜನಸಾಮಾನ್ಯರಿಗೆ ಅತ್ಯಾವಶ್ಯಕವೆಂಬುದನ್ನು ಕೂಲಂಕಷವಾಗಿ ಅರಿಯಲು, ಒಂದು ನಿಪುಣರ ಸಮಿತಿಯನ್ನು ಏರ್ಪಡಿಸುವುದೊಳ್ಳೆಯದು.

ಸದ್ಯದಲ್ಲೇ ಸರ್ಕಾರದವರು ಅಲ್ಲಲ್ಲಿ ಡೈರಿ ಫಾರಂಗಳನ್ನು ಮತ್ತು ಕೋಳಿ ಸಾಕಣಿಕೆಯ ಕ್ಷೇತ್ರಗಳನ್ನು ತೆರೆಯುವರೆಂದು ತಿಳಿಯುತ್ತದೆ. ಇದರ ಜೊತೆ ಆಯಾ ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ಮಾತ್ರ ಉದಾಹರಣಾರ್ಥವಾಗಿ, ನಾನಾ ವಸ್ತುಗಳ ಉತ್ಪತ್ತಿಗೆ ತಕ್ಕ ಕ್ಷೇತ್ರಗಳನ್ನು ಪ್ರಾರಂಭಿಸಿ ನಡೆಸಿಕೊಂದು ಬರುವುದಲ್ಲದೆ, ಆಯಾ ತಾಲ್ಲೂಕಿನ ಪ್ರಜೆಗಳೆಲ್ಲರಿಗೂ ಅವಶ್ಯಕವಾದ ವಸ್ತುಗಳನ್ನು ಉತ್ಪತ್ತಿ ಮಾಡಿಕೊಳ್ಳಲು ಇರುವ ತೊಂದರೆಗಳನ್ನು ಕೂಲಂಕುಷವಾಗಿ ಗಮನಿಸಿ ನಿವಾರಣೋಪಾಯಗಳನ್ನು ಸೂಚಿಸುವಂತಾಗಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರವೇ ಲಕ್ಷಗಳಗಟ್ಟಲೆ ಹಣವನ್ನು ಖರ್ಚುಮಾಡುವ

ಯೋಜನೆಗಳನ್ನು ಮಾಡುವುದರ ಜೊತೆಗೆ ಸಕಲ ಕಸಬು ಮತ್ತು ಉಪಕಸಬುಗಳಿಗೂ ಆಶ್ರಯದಾತರಾಗಿರುವ ಹಳ್ಳಿಯವರ ಅಭಿವೃದ್ಧಿಗಾಗಿ, ಅದರಲ್ಲೂ ಸಂಪಾದನಾ ಶಕ್ತಿ ಕುಂದಿ ಆಹಾರದ ಕೊರತೆಗೆ ತುತ್ತಾಗಿ ಕುಪಿತರಾಗಿರುವ ಬಡ ರೈತರ ಅಭಿವೃದ್ಧಿಗಾಗಿ ಕೊಂಚಹಣವನ್ನು ಖರ್ಚು ಮಾಡಲೆತ್ನಿಸಬೇಕು ಇದಕ್ಕೆ ಐಶ್ವರ್ಯವಂತರೂ ಉದಾರ ಮನಸು ಮಾಡುವುದು ನ್ಯಾಯವಾಗಿದೆ.

ಸದ್ಯದ ಸ್ಥಿತಿಯಲ್ಲಿ, ಬಡಹಳ್ಳಿಯ ರೈತರು ಪುಷ್ಟಿಯಾದ ಆಹಾರಕ್ಕೆ ಬದಲಾಗಿ, ಅಧಿಕ ಪ್ರಮಾಣದಲ್ಲಿ ದವಸಧಾನ್ಯಗಳನ್ನೇ ಉಪಯೋಗಿಸಬೇಕಾಗಿದೆ. ಹೀಗೆ ಉಪಯೋಗಿಸುವುದರಿಂದ, ದೇಶಕ್ಕೆ ಅಪಾರ ನಷ್ಟವೇ ಸರಿ. ಪೌಷ್ಟಿಕವಾದ ಆಹಾರವಸ್ತುಗಳು ನಿರ್ದಿಷ್ಟ ಪ್ರಮಾಣದಲ್ಲಿ ಸಿಕ್ಕುವಂತಾದರೆ, ಎಷ್ಟೋ ದವಸ ಧಾನ್ಯಗಳು ಉಳಿತಾಯವಾಗುವುದಲ್ಲದೆ, ಈಗ ರೈತರಲ್ಲಿ ಮನೆಮಾಡಿಕೊಂಡು ಕುಳಿತಿರುವ ಜಡತ್ವವು ಸುಲಭವಾಗಿ ತೊಲಗುವುದರಲ್ಲಿ ಸಂಶಯವಿಲ್ಲ ಆದರೆ ಸದ್ಯದ ಸ್ಥಿತಿಯಲ್ಲಿ ರೈತನ ಶರೀರ ಪುಷ್ಟಿಯು ಕಾಳಿನ ಕೊರತೆಯಿಂದಲೂ ಮತ್ತು ಇತರ ಪೋಷಕ ವಸ್ತುಗಳಿಲ್ಲದಿರುವುದರಿಂದಲೂ, ಹೆಚ್ಚಾಗಿ ಕುಂದುವುದರಲ್ಲಿ ಸಂಶಯವಿಲ್ಲ. ಇದರಿಂದ ರೈತನ ಜಡತ್ವಕ್ಕೆ ಸದವಕಾಶ ಸಿಕ್ಕಿದಂತಾಗಿ ಬಲವಾದ ಬೇರುಗಳನ್ನು ಬಿಡಲು ತಕ್ಕ ವಾತಾವರಣವೇರ್ಪಟ್ಟಿದ್ದು ರೈತನ ದುರದೃಷ್ಟ.

ಅಮೇರಿಕಾದಲ್ಲಿ ಒಂದು ಎಕರೆಯಲ್ಲಿ ೧೦೦ ಪಟ್ಟುಗಳ ಆಹಾರ ಧಾನ್ಯಗಳು ಬೆಳೆದರೆ ಅದೇ ಒಂದು ಎಕರೆಯಲ್ಲಿ ೪೦ ಪಟ್ಟುಗಳ ಹಾಲು ಅಥವಾ ೮ ಪಟ್ಟುಗಳ ಮಾಂಸ ಅಥವಾ ೬ ಪಟ್ಟುಗಳ ಮೊಟ್ಟೆಗಳು ಮಾತ್ರ ಉತ್ಪತ್ತಿಯಾಗುತ್ತದೆಯೊಂದು ತಿಳಿದು ಬಂದಿದೆ. ಇದರಿಂದ ನಮ್ಮ ಪೂರ್ವಿಕರು ಪ್ರಾಧಾನ್ಯವಾಗಿ ಎಣಿಸಿದ್ದ ವ್ಯವಸಾಯ ಮತ್ತು ಪಸುಪಾಲನೆಯೇ ಹೆಚ್ಚು ಜನರಿಗೆ ಆಹಾರವನ್ನು ಒದಗಿಸಬಲ್ಲದೆನ್ನುವುದನ್ನು ಪುಷ್ಟೀಕರಿಸದಂತಾಯಿತು. ನಮ್ಮ ದೇಶದಲ್ಲಿ ಇಂತಹ ಅಂಕಿ ಅಂಶಗಳೇ ಅಲ್ಲದೆ, ನಮ್ಮ ಅವಶ್ಯಕತೆಗಳು ಕೂಡ ವ್ಯವಸಾಯ, ಪಶುಪಾಲನೆಗಳಿಗೆ ತುಂಬಾ ಬೆಂಬಲ ಕೊಡುತ್ತವೆ ಇದನ್ನು ಅರಿತುಕೊಂಡು ಕಸಬು, ಉಪಕಸಬುಗಳನ್ನು ಬಳಕೆಗೆ ತರಲೆತ್ನಿಸುವುದರಿಂದಲೇ ನಾವು ಹೊಟ್ಟೆ ತುಂಬ ತಿನ್ನಬಹುದಾಗಿರುತ್ತದೆ.

ಆಹಾರವು ದೇಹಪುಷ್ಟಿಗೆ ಹೇಗೆ ತಳಪಾಯವೋ ಹಾಗೆಯೇ ನೀರು, ಗೊಬ್ಬರವೂ ಆಹಾರದ ಉತ್ಪತ್ತಿಗೆ ತಳಪಾಯವಾಗಿದೆ. ನೀರು ಗೊಬ್ಬರಗಳಿದ್ದರೆ ಸಸ್ಯ ಸಂಬಂಧಪಟ್ಟ ಆಹಾರ ವಸ್ತುಗಳನ್ನೂ ಮತು ಪ್ರಾಣಿ ಸಂಬಂಧ ಪಟ್ಟ ಆಹಾರ ವಸ್ತುಗಳನ್ನೂ ಸುಲಭವಾಗಿ ಪಡೆಯಬಹುದು.

ಆದರೆ ವ್ಯವಸಾಯ ಮತ್ತು ಪಶುಪಾಲನೆಗಳನ್ನು, ಸಂಘಗಳ ಮೂಲಕ, ಮಾಡಲೆತ್ನಿಸಿ ಕೆಲವು ವ್ಯಕ್ತಿಗಳೇ ಲಾಭಕೋರರಾಗಲೆತ್ನಿಸುವುದರಿಂದ ಜನ ಸಾಮಾನ್ಯರ ಕೆಲಸಗಳಿಗೆ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಆತಂಕಗಳೇರ್ಪಟ್ಟು ದೇಶದ ಸ್ಥಿತಿಯು ಹದಗೆಡಬಹುದಾಗಿರುತ್ತದೆ. ಹೆಚ್ಚು ಬಂಡವಾಳದ ಬಲದಿಂದ ಮಿತಿಮೀರಿದ ಮಸ್ತುಗಳು ನಿರ್ಮಾಣವಾಗಿ, ಇತರರ ಪುರೋಭಿವೃದ್ಧಿಗೆ ಕಲ್ಲು ಬೀಳುವ ವಾತಾವರಣವುಂಟಾದರೆ ಕಸಬುಗಾರರ ಅಭಿವೃದ್ಧಿಗೆ ಧಕ್ಕೆ ಬಡಿದಂತಾಗುತ್ತದೆ. ಇದರಿಂದ, ದೇಶದ ಸ್ಥಿತಿಯು ಒಟ್ಟಿನಲ್ಲಿ ಸುಧಾರಿಸಬಹುದಾದರೂ, ರೈತರೆಲ್ಲರ ಸ್ಥಿತಿಯೂ ಉತ್ತಮವಾಗಲಾರದು. ಆದುದರಿಂದ ವ್ಯಾಪಾರ, ಕೈಗಾರಿಕೆಗಳು, ವ್ಯವಸಾಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಧಾರಣೆ ವಾಸಿಗಳ ಸಮತೆಯನ್ನು ಏರ್ಪಡಿಸಿದರೆ, ಶ್ರಮಜೀವಿಗಳು ತಮ್ಮ ತಮ್ಮ ಸಂಪಾದನೆಗಳಿಂದಲೇ ಸುಖಿಜೀವನವನ್ನು ನಡೆಸಬಹುದಾಗಿರುತ್ತೆ.

ನಮ್ಮ ದೇಶದ ಜನಜೀವನವನ್ನು ಉತ್ತಮ ಪಡಿಸಲು ನಮ್ಮ ಐಶ್ವರ್ಯ ಮತ್ತು ಜ್ಞಾನಗಳನ್ನೆಲ್ಲಾ ಉಪಯೋಗಿಸಬೇಕಾದುದು ನಮ್ಮಗಳೆಲ್ಲರ ಕರ್ತವ್ಯವಾಗಿದೆ ಪ್ರತಿಯೊಂದು ಹಳ್ಳಿಯೂ ತನ್ನ ಅವಶ್ಯಕತೆಗಳನ್ನು ಅರಿತುಕೊಂಡು ಸಾಧ್ಯವಾದಮಟ್ಟಿಗೆ ಅವಶ್ಯಕವಾದ ವಸ್ತುಗಳನ್ನು ಉತ್ಪತ್ತಿ ಮಾಡಿಕೊಳ್ಳುವಂತಹ ವ್ಯವಸ್ಥೆಯಾಗಬೇಕಲ್ಲದೆ ದೂರದ ಸಂಘಗಳ ಅಥವಾ ಯಂತ್ರಗಳ ಗುಲಾಮಗಿರಿ ಮಾಡುವುದರಿಂದ ಸೌಖ್ಯ ಲಭಿಸಲಾರದು, ಇದನ್ನು ಅರಿತುಕೊಂಡು ನಡೆಯುವುದರಿಂದಲೇ ನಾವು ಅಭಿವೃದ್ಧಿಯಾಗಬೇಕಾಗಿದೆ. ಯೋಜನೆಗಳನ್ನು ತಯಾರಿಸುವಾಗ ನಮ್ಮ ಪೂರ್ವಿಕರ ಕೆಲಸ ಕಾರ್ಯಗಳನ್ನು ಗಮನಿಸಿ, ಮುಂದುವರಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು ತುಂಬಾ ಒಳ್ಳೆಯದು.

ರೈತನಿಗೆ ವ್ಯವಸಾಯವನ್ನು ಬಿಟ್ಟರೆ, ಆತನನ್ನು ನಂಬಿರುವ ಪಶುಪಕ್ಷಿ ಮೊದಲಾದುವೇ ಮುಖ್ಯ. ಇವು ವ್ಯವಸಾಯಕ್ಕೂ ಎಷ್ಟೋ ಸಹಾಯಮಾಡುವುದಲ್ಲದೆ ಇನ್ನೂ ಅನೇಕ

ವಿಧವಾದ ಪ್ರತಿಫಲಗಳನ್ನು ಸಹ ಕೊಡುತ್ತವೆ. ಹೆಚ್ಚು ಖರ್ಚಿಲ್ಲದೆ ಅನ್ಯರ ಕೈವಾಡವಿಲ್ಲದೆ ಲಾಭಕರವಾದ ಫಲಗಳು ದೊರೆಯುವುದು ರೈತರೇ ಏಕೆ ಮನುಷ್ಯರೆಲ್ಲರ ಪುಣ್ಯವೇ ಸರಿ. ಇವುಗಳನ್ನೆಲ್ಲಾ ಬದುಕಿರತಕ್ಕ ಯಂತ್ರಗಳೆಂದರೂ ತಪ್ಪಾಗದು. ಆದರೆಇದನ್ನೆಲ್ಲಾ ಮನಸ್ಸಿಗೆ ತಂದುಕೊಳ್ಳದೆ ನಮ್ಮ ದೇಶದ ರೈತರು ಇವುಗಳ ವಿಷಯದಲ್ಲಿ ಎಷ್ಟೋ ಉಪೇಕ್ಷೆ ತೋರಿಸುತ್ತಿದ್ದಾರೆಂಬುದು, ನಮ್ಮ ನಾಡಿನ ಪ್ರಾಣಿಗಳನ್ನು ನೋಡುವುದರಿಂದ ಸುಲಭವಾಗಿ ತಿಳಿಯುತ್ತದೆ. ಅನೇಕರಿಗೆ ಇವುಗಳಿಂದ ಆಗುವ ಪ್ರಯೋಜನಗಳೇ ಗೊತ್ತಿಲ್ಲ. ಅದೇ ಪರದೇಶದ ರೈತರು ಇವುಗಳೆಲ್ಲವುಗಳಿಂದಲೂ ಆಗತಕ್ಕ ಪ್ರಯೋಜನಗಳನ್ನು ಪಡೆಯುವುದಲ್ಲದೆ,ಇವುಗಳ ವಿಷಯದಲ್ಲಿ ಎಷ್ಟೋ ಶ್ರದ್ಧೆಯಿಂದ ವರ್ತಿಸುತ್ತಿದ್ದಾರೆಂಬುದನ್ನು ಕಂಡು ಕೇಳಿದವರಿಂದಲೂ, ಮತ್ತು ಪುಸ್ತಕಗಳಿಂದಲೂ ತಿಳಿಯುವುದಲ್ಲದೆ, ಅಲ್ಲಿಂದ ಆಗಾಗ ಆಮದು ಮಾಡಿಕೊಳ್ಳುತ್ತಿರುವ ಮಾದರಿಗಳಿಂದಲೂ ಚೆನ್ನಾಗಿ ವ್ಯಕ್ತವಾಗುತ್ತದೆ.

ನಮ್ಮ ನಾಡು ಪ್ರಾಣಿಗಳಿಗೂ, ಅಲ್ಲಿನ ಪ್ರಾಣಿಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಕಾಲಕ್ರಮೇಣ ನಮ್ಮ ನಾಡು ಪ್ರಾಣಿಗಳ ಜಾತಿ ನೀತಿಗಳು ಉತ್ತಮ ಸ್ಥಿತಿಗೆ ಬರುವುದಕ್ಕಿಂತಲೂ ಅದೋಸ್ಥಿತಿಗೆ ಇಳಿಯುತ್ತಿರುವುದಕ್ಕೆ ನಮ್ಮಗಳ ಉಪೇಕ್ಷೆಯೇ ಕಾರಣವೆನ್ನಬಹುದು ರೈತನು ಒಳ್ಳೆಯ ಸ್ಥಿತಿಯಲ್ಲಿರಬೇಕಾದರೆ, ರೈತನನ್ನು ನಂಬಿರತಕ್ಕ ಪ್ರಾಣಿಗಳೂ ಉತ್ತಮ ಸ್ಥಿತಿಯಲ್ಲಿರಬೇಕೆಂಬುದು ಖಂಡಿತವಾದ ವಿಷಯ.

ನಮ್ಮ ದೇಶದಲ್ಲಿರುವ ಎಮ್ಮೆ, ಹಸು, ಕುರಿ, ಮೇಕೆ, ಕೋಳಿ ಮೊದಲಾದ ಪ್ರಾಣಿಗಳ ತಳಿಗಳನ್ನು ಅಭಿವೃದ್ಧಿ ಪಡಿಸಿ, ಅವುಗಳನ್ನು ಆಯಾಯಾ ಉದ್ಧೇಶಗಳಿಗನುಸಾರವಾಗಿ ಪಳಗಿಸಿಕೊಳ್ಳುವುದು ಉತ್ತಮವಲ್ಲದೆ, ಕೆಲವು ಸಂಧರ್ಭಗಳಲ್ಲಿ ಜಾತಿ ಸಂಕ್ರಮಣಕ್ಕೆ ಎಡೆಕೊಡದೆ, ನಮ್ಮ ಉದ್ದೇಶ ಸಾಧನೆಗಳಿಗಾಗಿ ಉತ್ತಮ ವರ್ಗದ ಪ್ರಾಣಿಗಳನ್ನು ಅವಶ್ಯಕವೆಂದು ತೋರಿಬಂದರೆ, ಪರದೇಶದಿಂದ ತರಿಸಿಕೊಂಡು ಇಲ್ಲಿನ ಸ್ಥಿತಿಗಳಿಗೆ ಒಗ್ಗಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

ಪರದೇಶದ ಪ್ರಾಣಿಗಳ ತಳಿಗಳು ನಮ್ಮ ನಾಡು ಪ್ರಾಣಿಗಳಿಗಿಂತಲೂ ಹೀನಸ್ಥಿತಿಯಲ್ಲಿದ್ದುದರಿಂದ, ಒಂದು ವರ್ಷದಲ್ಲಾಗಲಿ ಅಥವಾ ಕೆಲವು ವರ್ಷಗಳಲ್ಲಾಗಲಿ

ಅಭಿವೃದ್ಧಿಗೆ ಬಂದಿಲ್ಲ ಎಡೆಬಿಡದ ಶಾಸ್ತ್ರೋಕ್ತವಾದ ಕಾರ್ಯಕ್ರಮಗಳಿಂದ ಅವು ಉತ್ತಮ ಸ್ಥಿತಿಗೆ ತರಲ್ಪಟ್ಟವೆಂದು ತಿಳಿದುಬರುತ್ತದೆ. ಅದಕ್ಕಾಗಿ ಎಷ್ಟೋ ಹಣ, ಕಾಲ, ಬುದ್ಧಿ ಶಕ್ತಿಗಳು. ವಿನಿಯೋಗವಾಗಿರುವುದರಲ್ಲಿ ಸಂದೇಹವಿಲ್ಲ.

ನಮ್ಮ ದೇಶದಲ್ಲೂ ಎಷ್ಟೋ ಪ್ರಯತ್ನಗಳು ನಡೆಯುತ್ತಿದ್ದರೂ ರೈತನಿಗೆ ಸಂಬಂಧಪಟ್ಟ ಪ್ರಾಣಿಗಳೆಲ್ಲಾ ಇದುವರೆಗೂ ಅಭಿವೃದ್ಧಿಗೆ ಬಂದಿಲ್ಲ. ಹೀಗೆ ಅಭಿವೃದ್ಧಿಗೆ ಬಂದಿರುತಕ್ಕದೆಂದರೆ ದೇಶೀಯ ಪ್ರಾಣಿಗಳಿಗೆ ಬದಲಾಗಿ ಅಲ್ಲಲ್ಲಿ ಪರದೇಶದ ಉತ್ತಮ ಜಾತಿ ಪ್ರಾಣಿಗಳನ್ನು ತಂದು ಸಾಕುವುದೇ ಆಗಿದೆ ಕೆಲವು ಸಂದರ್ಭಗಳಲ್ಲಿ ನಮ್ಮ ದೇಶದ ಪ್ರಾಣಿಗಳ ತಳಿಗಳನ್ನು ಅಭಿವೃದ್ಧಿ ಪಡಿಸುವುದು ತೊಡಕಾದ ಸಮಸ್ಯೆಯೆಂದೋ ಅಥವಾ ಲಾಭದಾಯವೆಂದೋ ಪರದೇಶದ ಪ್ರಾಣಿಗಳನ್ನು ಆಮದುಮಾಡಿಕೊಳ್ಳುವುದು ರೂಢಿ ಇದೆ. ಹೀಗೆ ಆಮದುಮಾಡಿದ ಪ್ರಾಣಿಗಳಿಂದ ಯಾವುದಾದರೂ ಒಂದು ಉದ್ದೇಶ ನೆರವೇರಿದರೂ ಆಮೇಲೆ ಕೆಲವು ತೊಡಕಾದ ಸಮಸ್ಯೆಗಳು, ಕೆಲವು ವೇಳೆ, ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ. ಹೀಗೆಯೇ ಸಮಸ್ಯೆಗಳು ಹೆಚ್ಚಿ ಕಡೆಗೆ ಜಟಿಲವಾಗಿ ಪರಿಣಮಿಸಬಹುದು.

ನಮ್ಮ ನಾಡಿನ ಪ್ರಾಣಿಗಳ ಜಾತಿಗಳನ್ನು ಸಂಕ್ರಮಣಕ್ಕೆ ಎಡೆಕೊಡುವುದರಿಂದ, ಎಂದಿನಂತೆ ದೇಶದ ಪ್ರಾಣಿಗಳು ಗೊತ್ತು ಗುರಿಯಿಲ್ಲದ ಸ್ಥಿತಿಯಲ್ಲಿರುವುದಲ್ಲದೆ ಅವುಗಳ ತಳಿಗಳು ಅ ಭಿವೃದ್ಧಿಯಾದಂತಾಗುವುದಿಲ್ಲವೆಂದು ಹೇಳಬಹುದು ಲಾಭಕ್ಕಾಗಿ ಮನಸೋತು, ಹೊಸ ತಳಿಗಳನ್ನು ತಂದರೂ ಅವುಗಳಿಂದ, ನಮಗೆ ಅನವಶ್ಯಕವಾದ ತೊಂದರೆಯಾಗದಂತೆ, ನೋಡಿಕೊಳ್ಳುವುದು ಒಳ್ಳೆಯದು.

ಒಟ್ಟಿನಲ್ಲಿ ನಮ್ಮ ನಾಡು ತಳಿಗಳನ್ನು ಅಭಿವೃದ್ಧಿ ಪಡಿಸಿ, ಅವಶ್ಯಕವೆಂದು ಸರಿ ತೋರಿಬಂದರೆ ಪರದೇಶದ ಜಾತಿಗಳನ್ನು ತಂದು, ಒಗ್ಗಿಸಿ ಜಾತಿ ಸಂಕ್ರಮಣವಾಗದಂತೆ ಅನಾವಶ್ಯಕವಾದ ತೊಂದರೆಗಳು ಒದಗದಂತೆ ಪ್ರಯೋಜನಗಳೇ ಹೆಚ್ಚಾಗಿರುವಂತೆ ನೋಡಿಕೊಂಡು, ಪರದೇಶದವರ ಮಟ್ಟಕ್ಕೇರುವ ಕಾರ್ಯಕ್ರಮಗಳು, ರೈತನ ಹಿತದೃಷ್ಟಿಯಿಂದಲೂ, ದೇಶದ ಹಿತದೃಷ್ಟಿಯಿಂದಲೂ ಏರ್ಪಟ್ಟರೆ, ಫಲಪ್ರದವಾಗಿ ಪರಿಣಮಿಸಬಹುದೆಂದು ತೋರುತ್ತದೆ.

ಇವುಗಳನ್ನೆಲ್ಲಾ ಪ್ರಾಣಿಗಳನ್ನು ಸಾಕುವ ಶಾಸ್ತ್ರಬಲ್ಲ ಪಂಡಿತರ ಶಾಸ್ತ್ರ ಜ್ಞಾನದಿಂದ ಬಿಡಿಸಿ, ವಿವರಿಸಿದರೆ, ಜನಸಾಮಾನ್ಯರಲ್ಲಿರುವ ಅನುಮಾನಗಳಿಗೆ ಆಧಾರವಿದೆಯೇ ಅಥವಾ ಇಲ್ಲವೇ ಎಂಬುದು ವಿಶದಪಡಿಸಿದಂತಾಗುತ್ತದೆ ರೈತಾಪಿ ವರ್ಗದಲ್ಲಿಯೇ ಅಲ್ಲದೆ ಇನ್ನೂ ದೇಶದಲ್ಲಿರುವ ಇತರರಿಗೆ ಇದರಿಂದ ಅನೇಕ ವಿಷಯಗಳು ತಿಳಿದು, ದೇಶದಲ್ಲಿರುವ ಪ್ರಾಣಿಗಳು ಅಭಿವೃದ್ಧಿಗೆ ಬರಲು, ಸತತವಾದ ಪ್ರಯತ್ನಗಳು ಪ್ರಬಲಿಸಲು ದಾರಿಯಾಗುವುದಲ್ಲದೆ ಪ್ರಾಣಿಗಳ ಶುದ್ಧವಾದ ತಳಿಗಳು, ನೆಲೆಸಲು ಅವಕಾಶವುಂಟಾಗುತ್ತದೆ. ಪರದೇಶದ ತಳಿಗಳನ್ನೇ ನಮ್ಮ ರೈತರು ತಂದು ಸಾಕಲು ಆರ್ಥಿಕ ಸ್ಥಿತಿಯು ಸರಿಯಾಗಿಲ್ಲ ಈಗಿರುವಂತೆ, ನಮ್ಮ ನಾಡು ತಳಿಗಳೆಲ್ಲಾ ನೀತಿ ನಿಯಮವಿಲ್ಲದೆ ಜಾತಿ ಕೆಡಸಲ್ಪಟ್ಟವಾಗಿ ಬಹಳ ಹೀನ ಸ್ಥಿತಿಗೆ ಇಳಿದಿವೆ.

ರೈತನು ಆಧುನಿಕ ವ್ಯವಸಾಯ ಕ್ರಮಗಳನ್ನು ಅನುಸರಿಸಿಸುವುದು ಎಷ್ಟೋ ಮುಖ್ಯವೊ ಅದಕ್ಕಿಂತಲೂ ಪ್ರಾಮುಖ್ಯವಾದ ವಿಷಯವಿದು ಅಂದ ಮೇಲೆ ಪರದೇಶಗಳ ತಳಿಗಳು ಎಷ್ಟು ಚೆನ್ನಾಗಿವೆಯೋ ಅಷ್ಟು ಚೆನ್ನಾಗಿ ಅಷ್ಟು ಶುದ್ಧವಾಗಿ ನಮ್ಮ ನಾಡು ಪ್ರಾಣಿಗಳ ಜಾತಿಗಳನ್ನು ಎಲ್ಲಾ ದೃಷ್ಟಿಗಳಿಂದಲೂ ಉತ್ತಮ ಸ್ಥಿತಿಗೆ ತರತಕ್ಕ ಕಾರ್ಯಕ್ರಮಗಳು ಏರ್ಪಟ್ಟರೆ ತುಂಬಾ ಚನ್ನಾಗಿರುತ್ತದೆ.

ಒಂದು ವರ್ಷಕ್ಕೆ ಮೊದಲೇ ಸರ್ಕಾರದವರು ಪ್ರಚಲಿತ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದರೆ ಸಾರ್ಥಕವಾಗುತ್ತಿದ್ದಿತು. ಜನ ಸಾಮಾನ್ಯರಾದರೂ ಈ ಮಹಾಕಾರ್ಯಕ್ಕೆ ಕೈಹಾಕಿ ಜಯಶೀಲರಾಗಬಹುದಾಗಿದ್ದಿತು. ಆದರೇ ಜನವೆಲ್ಲಾ ಆಕರ್ಷಣೀಯವಾಗಿ ಕಂಡುಬಂದುದರಿಂದ ಇತರ ಬೆಳೆಗಳನ್ನು ಬೆಳೆಸುವುದರಲ್ಲಿ ಮಗ್ನರಾದರು. ತತ್ಕಾಲದ ಸುಖಕ್ಕೆ ಮರುಳಾದರಲ್ಲದೆ ಕೋಟಿವಿದ್ಯೆಗಳಿಗಿಂತಲೂ ಮೇಟಿ ವಿದ್ಯೆಯೇ ಲೇಸು ಎಂಬುದನ್ನು ಅರಿತುಕೊಳ್ಳಲಿಲ್ಲ ಮುಂದಾಲೋಚನೆಯಿಂದ ಆಹಾರದ ಬೆಳೆಗಳನ್ನು ಬೆಳೆದಿದ್ದರೆ ಈಗ ಯಾರನ್ನೂ ಭಿಕ್ಷೆಬೇಡುವಂತಹ ಹೀನಸ್ಥಿತಿಗೆ ಇಳಿಯುತ್ತಿರಲಿಲ್ಲ.

ಸರ್ಕಾರದವರೊಂದಿಗೆ ಸಹಕರಿಸುವುದು ರೈತಾಪಿ ಜನರೇ ಏಕೆ, ಸಮಸ್ತ ಪ್ರಜಾ ವರ್ಗದವರ ಪರಮ ಕರ್ತವ್ಯವಾಗಿದೆ. ಕೆಲವರು ಬೆಳೆಯುತ್ತಿದ್ದರೆ ಉಳಿದವರು ನಮ್ಮ

ಇಷ್ಟಾನುಸಾರ ಹಣ ಸಂಪಾದನೆಯಲ್ಲೇ ಮಗ್ನರಾಗಿರುವುದು ಬೆಳೆಯುವವರನ್ನೂ ಸಹ ಕರ್ತವ್ಯ ಹೀನರಾಗುವಂತಹ ಸ್ಥಿತಿಗೆ ಎಳೆಯುತ್ತದೆ ರೈತಾಪಿ ಜನರು ಕೊಳ್ಳುವ ವಸ್ತುಗಳ ಬೆಲೆ ಏನೂ ಕಡಿಮೆಯಾಗಿಲ್ಲ. ಇದುವರೆಗೂ ಕೇವಲ ವ್ಯವಸಾಯದಲ್ಲೇ ಮಗ್ನರಾಗಿರುವವ ಒಂದು ಚಿಕ್ಕಕಾಸು ಲಾಭವನ್ನೂ ಗಳಿಸಿಲ್ಲ ಎಂಬುದು ದೇಶ ವಿದೇಶಗಳ ಆರ್ಥ ಪ್ರವೀಣರ ಅಭಿಪ್ರಾಯವಾಗಿರುವಾಗ ರೈತರು ಹಣದ ಬೆಳೆಗಳನ್ನು ಬೆಳೆದಲ್ಲದೆ ಉಳಿಗಾಲವಿಲ್ಲವೆಂದ ಹಾಗಾಯ್ತು. ಆರ್ಥಿಕ ಮುಗ್ಗಟ್ಟಿಗೆ ಒಳಗಾಗ ದಿರಬೇಕಾದರೆ ರೈತರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಷ್ಟು ಹಣವನ್ನು ತಮ್ಮ ಜಮೀನುಗಳಿಂದಲೋ ಅಥವಾ ಜಮೀನಿನ ಆಶ್ರಯಕ್ಕೊಳಪಟ್ಟ ಉಪಕಸುಬುಗಳಿಂದಲೋ ಸಂಪಾದಿಸಲೇಬೇಕು. ಸುಖ ಪಡಬೇಕೆಂಬ ಆಸೆ ಈಗ ಎಲ್ಲಾ ಜನರನೂ ಬಾಧಿಸುತ್ತಿದೆ. ಇದನ್ನು ಅರಿತು ಇತರರೆಲ್ಲರೂ ರೈತನನ್ನು ಗೌರವಿಸಲೇಬೇಕು ಇಲ್ಲದ ಪಕ್ಷದಲ್ಲಿ ಬೇಸಾಯ ಕ್ಷೀಣಿಸಲು ಕಾರಣವಾಗುತ್ತದೆ. ಆದರೆ ರೈತನೂ ಸಹ ತನ್ನ ಜವಬ್ದಾರಿಯನ್ನು ಅರಿತು ಪ್ರಪಂಚದ ಇತರ ರಾಷ್ಟ್ರಗಳ ಕಡೆ ಕಣ್ಣುಬಿಟ್ಟು ನೋಡಿ ನಡೆಯಬೇಕು ಪ್ರತಿಯೊಂದಕ್ಕೂ ಸರ್ಕಾರದವರನ್ನೇ ನಂಬಿಕೊಂಡಿರುವುದು ತುಂಬಾ ಶೋಚನೀಯಕರವಾದ ಸಂಗತಿ. ಇದು ತೊಲಗಿದಂತೆಲ್ಲಾ ರೈತನು ಅಭಿವೃದ್ಧಿ ಹೊಂದುತ್ತಿದ್ದಾನೆಂದು ತಿಳಿಯಬೇಕು.

ಈಗಿನ ಪರಿಸ್ಥಿತಿಗೆ, ಮುಖ್ಯವಾಗಿ ಮಳೆ ಎಂದಿನಂತೆ ಬಾರದಂತಾದುದು ಜೊತೆಗೆ ನೀರಾವರಿ ಅನುಕೂಲಗಳನ್ನು ಹೆಚ್ಚಿಸದಿರುವುದು ಹೆಚ್ಚು ಆಹಾರ ಬೆಳೆಯುವ ಚಳುವಳಿ ಕಾರ್ಯಗತವಾಗದೆ ಉಳಿದುದು, ರೈತಾಪಿ ಜನರು ತತ್ಕಾಲದ ಸುಖಕ್ಕೆ ಮನಸೋತು ಹೆಚ್ಚು ಆಹಾರ ಬೆಳೆಯದೆ ಉಳಿದುದು, ಜನ ಹೊರಗಡೆಯಿಂದ ಧಾನ್ಯಗಳನ್ನು ಮೊದಲಿನಿಂದಲೂ ತಂದಷ್ಟು ಧಾರಾಳವಾಗಿ ತರಲು ಸಾಧ್ಯವಾಗದಿರುವುದು, ಕಾರಣವೆನ್ನಬಹುದು. ಈ ವರ್ಷ ದುರದೃಷ್ಟವಶಾತ್ ಮಳೆಬಾರದೆ ಅನೇಕ ಗ್ರಾಮಗಳಲ್ಲಿ ಬೆಳೆ ಇಲ್ಲದಂತಾಗಿರುವುದಲ್ಲದೆ ಬೆಳೆ ಆಗಿರತಕ್ಕ ಕೆಲವು ಗ್ರಾಮಗಳಲ್ಲೂ ಅವಶ್ಯಕತೆಗೆ ಸಾಕಾಗುವಷ್ಟುನ್ನು ಬೆಳೆಯುವಂತಾಗಿರುವುದರಿಂದ ಕಾಳಿನ ಕೊರತೆ ಕಳೆದ ವರ್ಷಕ್ಕಿಂತಲೂ ಎಷ್ಟೋ ಪಾಲು ಹೆಚ್ಚಾಗಿದೆ ಎನ್ನಬಹುದು. ಪ್ರತಿಗ್ರಾಮದಲ್ಲೂ ಕೆಲವರು ಮತ್ತು ಕೆಲವು ಗ್ರಾಮಗಳು ಪೂರ್ತಿಯಾಗಿ, ಪ್ರತಿವರ್ಷವೂ ಕೊಂಡು ತಿನುವುದೇ ಹಣೆಬರಹವಾಗಿದೆ. ಉಳಿದವರಲ್ಲೂ ಅನೇಕರು ತಕ್ಕಷ್ಟು ಜಮೀನಿಲ್ಲದೆ ಕೆಲವು ತಿಂಗಳಿಗಾಗುವಷ್ಟನ್ನು ಮಾತ್ರ

ಬೆಳೆಯುವುದರಿಂದ, ಉಳಿದ ತಿಂಗಳುಗಳ ಜೀವನಕ್ಕೆ ತುಂಬಾ ತೊಂದರೆ ಪಡಬೇಕಗಿದೆ. ಈಗಾಗಲೇ ಅನೇಕರು ಕಾಳಿನ ಕೊರತೆಯಿಂದ ತೊಂದರೆ ಪಡುತ್ತಿರುವುದಲ್ಲದೆ ಇನ್ನು ಮೇಲೆ ಎಲ್ಲರಿಗೂ ಕಾಳಿನ ಕೊರತೆಯುಂಟಾಗುತ್ತದೆ. ಕಾಳಿನ ಕೊರತೆಯಿಂದ ಶರೀರದ ಪುಷ್ಟಿ ಕುಂದದ ರೀತಿ ಇರಬೇಕಾದರೆ ವಿವಿಧ ತರಕಾರಿಗಳು, ಹಾಲು, ತುಪ್ಪ, ಎಣ್ಣೆ ಮೊದಲಾದ ಪದಾರ್ಥಗಳು ಅತ್ಯಾವಶ್ಯಕವೆಂಬುದನ್ನು ಗ್ರಹಿಸಬೇಕು. ಮಾಂಸಾಹಾರಿಗಳು ಸಸ್ಯ ಸಂಬಂಧಪಟ್ಟ ವಸ್ತುಗಳನ್ನು ಕಡಿಮೆಮಾಡಿ ಮೀನು, ಮಾಂಸ, ಮೊಟ್ಟೆಗಳನ್ನು ಹೆಚ್ಚಾಗಿ ಉಪಯೋಗಿಸಬೇಕು. ಹಾಗೆಯೇ ಸಸ್ಯಾಹಾರಿಗಳು ಸೊಪ್ಪು, ತರಕಾರಿ, ಮೊದಲಾದುವುಗಳನ್ನು ಹೆಚ್ಚಾಗಿ ಉಪಯೋಗಿಸಬೇಕು. ಆದುದರಿಂದ ಪ್ರತಿಯೊಬ್ಬರೂ ಸೊಪ್ಪು ತರಕಾರಿಗಳನ್ನು ಬೆಳೆಯಬೇಕು. ಅಕ್ಕಿ, ರಾಗಿ, ಕೊರತೆಯಿಂದ ಗೋಧಿ ಮೊದಲಾದ ಧಾನ್ಯಗಳನ್ನು ಉಪಯೋಗಿಸಬೇಕಾಗಿದೆ. ಆದುದರಿಂದ ಅವುಗಳ ಉಪಯೋಗಕ್ರಮಗಳನ್ನು ಅರಿತುಕೊಳ್ಳಬೇಕು. ಪ್ರತಿಯೊಬ್ಬರೂ ಕಾಳನ್ನು ಉಳಿಸಲು ಹೆಸರು, ಕಡಲೆ, ಹುರುಳಿ, ಮೊದಲಾದ ದ್ವಿದಳ ಧಾನ್ಯಗಳನ್ನು ಮತ್ತು ನೆಲಗಡಲೆಯನ್ನು ಉಪಯೋಗಿಸಲೆತ್ನಿಸಬೇಕು. ಆಲೂಗಡ್ಡೆ, ನೀರುಳ್ಳಿ ಮೊದಲಾದ ಗೆಡ್ಡೆಗೆಣಸುಗಳನ್ನು ಸಹ ಬಳಸಲೆತ್ನಿಸಬೇಕು.

ಸರ್ಕಾರದವರು ಆಯಾ ಪ್ರದೇಶದಲ್ಲಿ ಒದಗಿಸಬಹುದಾದ ಅಥವಾ ಒದಗಬಹುದಾದ ವಿವಿಧ ಧಾನ್ಯಗಳನ್ನು, ಗೆಡ್ಡೆಗೆಣಸುಗಳನ್ನು ಗಮನಿಸಿ, ಯಾವ ಪ್ರಮಾಣದಲ್ಲಿ ಪ್ರತಿಯೊಂದನ್ನೂ ಉಪಯೋಗಿಸಿದರೆ ಆರೋಗ್ಯ ಕುಂದದೆ ಕಾಯ ಪುಷ್ಟಿಯನ್ನು ಉಳಿಸಿಕೊಳ್ಳಬಹುದೆಂಬುದನ್ನು ಕೂಲಂಕಷವಾಗಿ ನಿರ್ಧರಿಸಿ ಪ್ರಚಾರ ಮಾಡಬೇಕು, ಈಗಾಗಲೇ ಆಹಾರ ವಿಜ್ಞಾನ ಪಂಡಿತರಿಂದ ಪರಿಶೋಧಿಸಲ್ಪಟ್ಟಿರುವುದರಿಂದ, ಇದೇನು ಅಷ್ಟು ಕಷ್ಟಕರವಾದ ಕೆಲಸವಾಗಲಾರದು. ಇಲ್ಲವಾದರೆ, ಜನ ಒಂದೇ ವಿಧವಾದ ಧಾನ್ಯಾವನ್ನೋ, ಗಡ್ಡೆಯನ್ನೋ ತಿಂದು, ತಮ್ಮ ಆರೋಗ್ಯ ಭಾಗ್ಯವನ್ನು ಹಾಳುಮಾಡಿಕೆ ೂಳ್ಳಬಹುದಾಗಿರುತ್ತದೆ. ಇದು ಸಕಾಲವಾಗಿರುವುದರಿಂದ ಆಹಾರ ವಿಜ್ಞಾನದ ಅರಿವನ್ನು ಜನರಿಗೆ ಮಾಡಿಕೊಡುವುದು ಅತ್ಯಾವಶ್ಯಕವಾಗಿದೆ.

ಈಗ ಎಂತಹ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎಂಬುದನ್ನು ಅರಿತು ಕಾರ್ಯಾಚರಣೆಗೆ ತೊಡಗಬೇಕು ಸೌಲಭ್ಯಗಳನ್ನು ಕೊಡುವುದು ಸರ್ಕಾರದವರ

ಕೆಲಸ, ಅವುಗಳನ್ನು ಸದುಪಯೋಗಪಡಿಸಿಕೊಳ್ಳುವುದು ಜನಸಾಮಾನ್ಯರ ಕೆಲಸ. ನಮ್ಮ ಸರ್ಕಾರದವರು ಈ ವರ್ಷ ೮೦ ಸಾವಿರ ಎಕರೆಗೆ ಮೇಲ್ಪಟ್ಟು ಜಮೀನನ್ನು ಹೆಚ್ಚು ಆಹಾರ ಬೆಳೆಯಲು ಕೊಟ್ಟರೂ ಮಳೆಯ ಅಭಾವದಿಂದ ಪ್ರಯೋಜನವೇ ಇಲ್ಲದಂತಾಯಿತು. ಇನ್ನೂ ಸಾಧ್ಯವಾಗುವ ಸಹಾಯಗಳನ್ನು ಮಾಡಲು ಮತ್ತು ಮಾಡುವ ಸಹಾಯವನ್ನು ಜನಸಾಮಾನ್ಯರಿಗೆಲ್ಲಾ ತಿಳಿಯುವಂತೆ ಮಾಡುವುದು ಬಹಳ ಮುಖ್ಯವಾಗಿದೆ. ಘನ ಸರ್ಕಾರದವರು ಕೊಡುವ ಸೌಲಭ್ಯಗಳು, ಈಗಿನ ಸ್ಥಿತಿಯನ್ನು ಉತ್ತಮ ಪಡಿಸುವಂತೆಯೂ, ಮತ್ತು ಜನ ಸಾಮಾನ್ಯರಿಗೆಲ್ಲಾ ಮುಟ್ಟುವಂತೆಯೂ ಇರಬೇಕು.

ಈ ಕೆಳಗೆ ಕಂಡ ಸೌಲಭ್ಯಗಳು ಈಗಿನ ಸ್ಥಿತಿಯನ್ನು ಕೊಂಚಮಟ್ಟಿಗೆ ಉತ್ತಮ ಪಡಿಸಬಹುದೆಂದು ನಂಬಲಾಗಿದೆ.

೧. ಕೆರೆಗಳಿಗೆ ಕಾಲಾವಧಿಯೊಳಗಾಗಿ ನೀರು ಬರದೆ ಇದ್ದ ಭಾಗದಲ್ಲಿ ಕೆರೆಗಳಲ್ಲಿ ಭಾವಿಗಳನ್ನು ತೋಡಿಸಿ ವ್ಯವಸಾಯಕ್ಕೆ ಏರ್ಪಡಿಸುವುದು.

೨. ಕೆರೆಗಳ ಅಚ್ಚುಕಟ್ಟುಗಳಲ್ಲಿ ಭಾವಿಗಳನ್ನು ತೋಡಿಸಿ ಬೇಸಾಯಕ್ಕೆ ಏರ್ಪಡಿಸುವುದು

೩. ಹಾಲಿ ಇರತಕ್ಕ ಬಾಗಾಯ್ತು ಜಮೀನುಗಳಲ್ಲಿ ಮತ್ತು ನೀರಿನ ಆಸರೆ ಇರುವ ಇತರ ಜಮೀನುಗಳಲ್ಲಿ ಪ್ರತಿಯೊಬ್ಬರೂ ಆಹಾರದ ಬೇಳೆಗಳನ್ನು ಬೆಳೆಸುವಂತೆ ಕಡ್ಡಾಯಪಡಿಸುವುದು.

೪. ಹಾಲಿ ಇರತಕ್ಕ ಮತ್ತು ಮುಂದೆ ತೋಡತಕ್ಕ ಭಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಬೇಸಾಯಕ್ಕಾಗಿ ನೀರೆತ್ತುವ ಪಂಪುಗಳನ್ನು ಉಪಯೋಗಿಸಲು ಸೌಕಯ ರ್ವನ್ನುಂಟುಮಾಡಿಕೊಡುವುದು. ಹೀಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಾವಿಗಳ ಆಸರೆಯಲ್ಲಿ ಅವಶ್ಯಕತೆಗಿಂತಲೂ ಹೆಚ್ಚಾಗಿ ಇತರ ಬೆಳೆಗಳನ್ನು ಬೆಳೆಯದಂತೆ ಕಡ್ಡಾಯಪಡಿಸಬೇಕು.

೫. ನೀರಿನ ಮಟ್ಟ ಮೇಲೆ ಇದ್ದು, ವ್ಯವಸಾಯದ ಹಿಡುವಳಿಗಳಲ್ಲದ ಜಮೀನುಗಳನ್ನು ಕೂಡಲೇ ಸಾಗುವಳಿಗೆ ಒದಗಿಸಿಕೊಡುವುದಲ್ಲದೆ ಅಲ್ಲಿ ಬಾವಿಗಳನ್ನು ನೋಡಿಸಿ ಬೇಸಾಯಕ್ಕೆ ಸಹಾಯ ಮಾಡಬೇಕು.

೬. ಹೆಚ್ಚು ಆಹಾರವನ್ನು ಬೆಳೆಯಲು ತಗಲುವ ಖರ್ಚುಗಳಿಗೆ, ಅವಶ್ಯಕವಿರುವವರಿಗೆ ಹಣವನ್ನು ಮತ್ತು ಇತರ ವಿಧವಾದ ಸಹಾಯವನ್ನು ಮಾಡಬೇಕು.

೭. ಮೇಲ್ಕಂಡಂತೆ ಬೆಳೆಯಲು ಇಷ್ಟ ಪಡುವವರಿಗೆ ಅವಶ್ಯಕವಾದ ಬಿತ್ತನೆ ರಾಗಿ, ಭತ್ತ ಮೊದಲಾದುವುಗಳನ್ನು ಒದಗಿಸಿಕೊಡುವುದು.

೮. ತರಕಾರಿ ಸೊಪ್ಪುಗಳನ್ನು ಪ್ರತಿಯೊಬ್ಬರೂ ಬೆಳೆಯಲು ಬೀಜಗಳನ್ನು ಒದಗಿಸುವುದು.

೯. ರಿಲೀಫ್ ಕಾಮಗಾರಿಗಳಲ್ಲಿ ರಸ್ತೆ ಮೊದಲಾದುವುಗಳನ್ನು ಮಾಡುವುದು ಬದಲಾಯಿಸಿ, ಬಾವಿ ತೋಡಿಸುವುದು ಮೊದಲಾದ ನೀರಾವರಿ ಕಾಮಗಾರಿಗಳನ್ನು ಮಾಡಿಸಿ ತನ್ಮೂಲಕ ಸಾಗುವಳಿಗೂ, ಜನಗಳಿಗೂ ನೀರು ಒದಗುವಂತೆ ಮಾಡಬೇಕು.

೧೦.ಹೆಚ್ಚು ಆಹಾರ ಬೆಳೆಯುವ ಯೋಜನೆಯಂತೆ ಕೆಲಸಮಾಡುವವರಿಗೆ ಬೀಜದ ಕಾಳುಗಳು, ವಿದ್ಯುಚ್ಛಕ್ತಿಯನ್ನು ಒದಗಿಸುವುದೇ ಅಲ್ಲದೆ ಅವಶ್ಯವಾದ ಯಂತ್ರೋಪಕರಣಗಳನ್ನು ಸಹ ಸುಲಭದರಲ್ಲಿ ಒದಗಿಸಬೇಕು.

೧೧.ಬಾವಿಗಳನ್ನು ತೋಡಲು ಸಾಧ್ಯವಿಲ್ಲದ ಕಡೆ ಬೋರ್‌ವೆಲ್‌ಗಳನ್ನು ತೋಡಿಸಿ ಸಾಗುವಳಿಗೂ ಜನಗಳಿಗೂ ದನಗಳಿಗೂ ನೀರು ಒದಗುವಂತೆ ಮಾಡಬೇಕು.

೧೨.ಕೆಲವು ಗ್ರಾಮಗಳಲ್ಲಿ ಬಡವರೇ ವಾಸವಾಗಿದ್ದು ಆಹಾರಕ್ಕೆ ಗತಿ ಇಲ್ಲದಂತಿರುವುದಲ್ಲದೆ, ಬಾವಿಗಳನ್ನು ತೆಗೆಯಲು ಸಹ ಮಾರ್ಗವಿಲ್ಲದೆ, ಸಾಗುವಳಿಗೆ ಯೋಗ್ಯವಾದ ಜಮೀನುಗಳಿದ್ದರೂ, ಕೂಲಿಮಾಡಿ ಜೀವಿಸುತ್ತಿರುವುದರಿಂದ ಅಂತಹವರಿಗೆ ಉಚಿತವಾಗಿ ಬಾವಿಗಳನ್ನು ತೋಡಿಸಿಕೊಟ್ಟು ಉಪಕಾರ ಮಾಡಬೇಕು. ಇಲ್ಲವಾದರೆ ಅವರಿಂದ ಇತರರ ನೆಮ್ಮದಿಗೂ ಭಂಗವುಂಟಾಗುವ ಸಂಭವವಿದೆ.

೧೩.ರಿಲೀಫ್ ಕಾಮಗಾರಿಗಳಲ್ಲಿ ನೀರಾವರಿ ಕೆಲಸಗಳನ್ನು ಮಾಡಿಸುವುದಲ್ಲದೆ, ಅವಕಾಶವಿದ್ದರೆ ಕೆರೆಗಳ ಉಸುಬು ಮಣ್ಣನ್ನು ತೆಗೆಸುವುದು ಮತ್ತು ಕಟ್ಟು ಕಾಲುವೆಗಳನ್ನು ಭದ್ರ ಪಡಿಸಿ ಅವುಗಳ ಮೂಲಕ ಮಣ್ಣು ಕೆರೆಗಳಿಗೆ ಬಂದು ಸೇರದಂತಹ ಕ್ರಮಗಳನ್ನೂ ಕೈಗೊಳ್ಳಬೇಕು.

೧೪.ಹೆಚ್ಚು ಆಹಾರ ಬೆಳೆಯುವ ಚಳುವಳಿಯನ್ನು ತೀವ್ರವಾಗಿ ನಡೆಸಲು ಮತ್ತು ಆಹಾರ ಸ್ಥಿತಿಯನ್ನು ಉತ್ತಮ ಪಡಿಸಲು ಪ್ರತಿ ಹೋಬಳಿಯಲ್ಲೂ ಒಂದೊಂದು ಮುಖಂಡರ ಸಮಿತಿಯನ್ನು ಏರ್ಪಡಿಸಬೇಕು.

೧೫.ಹೆಚ್ಚು ಆಹಾರ ಬೆಳೆಯುವ ಚಳುವಳಿಯನ್ನು ಜನಸಾಮಾನ್ಯರಲ್ಲಿ ಹೆಚ್ಚು ಬಳಕೆಗೆ ತರಲು ರಚನಾತ್ಮಕವಾದ ಕೆಲಸಗಳನ್ನು ಕೈಗೊಳ್ಳಲು ಪರಿಣಾಮಕಾರಿಯಾದ

ಪ್ರಯತ್ನಗಳನ್ನು ಕೈಗೊಳ್ಳಬೇಕು. ಅದಕ್ಕಾಗಿ ಅವಶ್ಯಕವಿದ್ದರೆ ಒಬ್ಬ ಅಧಿಕಾರಿಯನ್ನು ಪ್ರತಿ ತಾಲ್ಲೂಕಿನಲ್ಲಿಯೂ ನೇಮಿಸಬೇಕು.

೧೬.ಹಾಲು ಪಟ್ಟಣಗಳಿಗೆ ಬರದಂತೆ ಕಡ್ಡಾಯಮಾಡಿದರೆ ಈ ಆಹಾರ ಅಭಾವದ ಕಾಲದಲ್ಲಿ ಹಳ್ಳಿಗಾಡುಗಳವರ ದೇಹಪುಷ್ಟಿ ಕುಂದದಂತಾಗಲು ಕೊಂಚಮಟ್ಟಿಗೆ ಸಹಕಾರಿಯಾಗುತ್ತದೆ.

೧೭.ನದಿಗಳ ಮತ್ತು ಇತರ ಜಲಾಶಯಗಳ ಅಕ್ಕಪಕ್ಕದಲ್ಲಿ, ತಲಪರಿಗೆ ಬಾವಿ ಮೊದಲಾದುವುಗಳನ್ನು ತೋಡಿಸಿ ಸಾಗುವಳಿಗೆ ಏರ್ಪಡಿಸಿದರೆ ಕೊಂಚಮಟ್ಟಿಗೆ ಆಹಾರಧಾನ್ಯಗಳನ್ನು ಬೆಳೆದುಕೊಳ್ಳಬಹುದಾಗಿರುತ್ತೆ.

೧೮.ಒಟ್ಟಿನಲ್ಲಿ ದೇಶದಲ್ಲಿರುವ ನೀರಾವರಿ ಜಾಗಗಳಲ್ಲಿ ಕಡ್ಡಾಯವಾಗಿ ಆಹಾರದ ಬೆಳೆಗಳನ್ನು ಬೆಳೆಸುವಂತೆ ಪ್ರೋತ್ಸಾಹಿಸಬೇಕು.

೧೯.ದೇಶದ ಯಾವ ಯಾವ ಗ್ರಾಮದಲ್ಲಿ ಆಹಾರದ ಬೆಳೆಗಳನ್ನು ಬೆಳೆಸಲು ಏನೇನು ಅನುಕೂಲಗಳಿವೆ, ಎಂತಹ ಸೌಲಭ್ಯಗಳು ಅಗತ್ಯವಾಗಿವೆ ಮೊದಲಾದುವುಗಳನ್ನು ತಿಳಿಯುವುದಲ್ಲದೆ, ಅವುಗಳನ್ನು ಎಷ್ಟು ಮಾತ್ರ ಉಪಯೋಗಿಸಿಕೊಳ್ಳಬಹುದೆಂಬುದನ್ನು ನಿರ್ಧರಿಸಬೇಕು.

೨೦.ಹಿಡುವಳಿ ಜಮೀನುಗಳಲ್ಲಿ ಅನೇಕ ಕಡೆ ನೀರಿನ ಮಟ್ಟ ಮೇಲೆ ಇರುವುದರಿಂದ ಅಂತಹ ಕಡೆ ಬಾವಿಗಳನ್ನು ತೋಡಿ ವ್ಯವಸಾಯ ಮಾಡುವಂತೆ ಪ್ರೋತ್ಸಾಹಿಸಬೇಕು.

೨೧.ಪ್ರತಿಯೊಬ್ಬರೂ ಬೆಳೆಯುವಂತಹ ಚಳುವಳಿಯನ್ನು ಹೂಡಲು ಸರ್ಕಾರದ ಎಲ್ಲಾ ಅಧಿಕಾರಿವರ್ಗದವರು, ಗ್ರಾಮಾಧಿಕಾರಿಗಳೇ ಮೊದಲಾದ ಪ್ರಜಾ ಮುಖಂಡರು ತ್ರಿಕರಣ ಶುದ್ಧಿಯಾಗಿ ತೊಡಗುವಂತೆ ಪ್ರೋತ್ಸಾಹಿಸಬೇಕು.

ವಿದ್ಯುಚ್ಛಕ್ತಿಯನ್ನು ಸಾಧ್ಯವಾದ ಮಟ್ಟಿಗೆ ದೇಶದಲ್ಲಿ ಆಹಾರದ ಅಭಾವಕ್ಕೆ ತುತ್ತಾಗಿ ನೀರಿನ ಆಸರೆ ಇರುವ ಪ್ರದೇಶದ ಜನರಿಗೂ ಮತ್ತು ಹೆಚ್ಚು ಆಹಾರ ಬೆಳೆಯುವ ಇತರರಿಗೂ, ಒದಗಿಸಿಕೊಟ್ಟು ಹೆಚ್ಚು ಆಹಾರ ಬೆಳೆಯಲು ಪ್ರೋತ್ಸಾಹಿಸಬೇಕು.

ಈಗ ಹಾಲಿ ಬೇಸಾಯಕ್ಕೆ ವಿದ್ಯುಚ್ಛಕ್ತಿ ಒದಗಿಸುವುದರಲ್ಲಿ ತುಂಬಾ ಅನಾನುಕೂಲಗಳಿವೆ. ಇವುಗಳನ್ನು ಕೂಡಲೇ ಘನ ಸರ್ಕಾರದವರು ಸರಿಪಡಿಸಿ ಬೇಸಾಯಗಾರರಿಗೆ ಸೌಕರ್ಯಗಳ

ನ್ನುಂಟುಮಾಡಿಕೊಡಬೇಕು. ಈಗ ಹಣದ ಬೆಳೆಗಳಿಗೆ ೦–೦–೬ ರಿಂದ ೦–೧–೦ ಯೂನಿಟ್ ದರವನ್ನು ವಿಧಿಸಿರುವುದು ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಇಲಾಖೆಗೆ ಖರ್ಚಾಗುವ ಮೊಬಲಗಿನ ಶೇಕಡ ೧೦ ರಷ್ಟು ವಿನಿಮಯ ಆಗಿ ವಿಧಿಸಿರುವುದು ಕೇವಲ ಹೆಚ್ಚು ಆಹಾರ ಬೆಳೆಯಬೇಕೆಂಬ ಸದುದ್ದೇಶದಿಂದಲೇ ಆಗಿದೆ ಆದರೇ ಕಾರ್ಯತಹ ಇದು ಹೆಚ್ಚು ಆಹಾರ ಬೆಳೆಯಲು ಒಂದು ಅಂತಕವಾಗಿದೆ.

ಜಮೀನಿನ ಕೊಂಚಭಾಗದಲ್ಲಾದರೂ ಹಿಪ್ಪುನೇರಳೆ, ನೀರುಳ್ಳಿ ಹೂಗಿಡಗಳು ಮತ್ತು ಹೊಗೆಸೊಪ್ಪನ್ನು ಬೆಳೆದರೂ ಮೇಲ್ಕಂಡಂತೆ ಹೆಚ್ಚು ದರ ವಿಧಿಸಲ್ಪಡುವುದರಿಂದ ಕೇವಲ ಆಹಾರದ ಬೆಳೆಗಳನ್ನು ಮಾತ್ರ ಬೆಳೆದು ರಿಯಾಯತಿ ಪಡೆಯಬಹುದಾಗಿದೆ.

ನಮ್ಮ ದೇಶದ ರೈತರ ಹಿಡಿವಳಿಗಳು ತೀರಾ ಚಿಕ್ಕವು. ಅದರಲ್ಲೂ ಬಾಗಾಯ್ತು ಜಮೀನುಗಳ ವಿಸ್ತೀರ್ಣ ಬಹಳ ಕಡಿಮೆಯಾಗಿದೆ ರೈತಾಪಿ ಜನ ಕೊಳ್ಳುವ ವಸ್ತುಗಳ ಬೆಲೆ ಏನೋ ಕಡಿಮೆಯಾಗಿಲ್ಲ. ಇದುವರೆಗೂ ಕೇವಲ ವ್ಯವಸಾಯದಲ್ಲೇ ಮಗ್ನರಾಗಿರುವವರು ಒಂದು ಚಿಕ್ಕಕಾಸು ಲಾಭವನ್ನೂ ಗಳಿಸಲಿಲ್ಲವೆಂಬುದು ದೇಶವಿದೇಶಗಳ ಆರ್ಥಿಕ ಪ್ರವೀಣರ ಅಭಿಪ್ರಾಯವಾಗಿರುವಾಗ, ರೈತರು ತಮ್ಮ ಅವಶ್ಯಕತೆ ತಕ್ಕಷ್ಟು ಹಣದ ಬೆಳೆಗಳನ್ನು ಬೆಳೆದಲ್ಲದೆ ಅಥವಾ ಜಮೀನಿನ ಆಶ್ರಯಕ್ಕೆ ಒಳಪಟ್ಟ ಉಪಕಸುಬುಗಳಿಂದ ಹಣವನ್ನು ಸಂಪಾದಿಸಿದ್ದಲ್ಲದೆ, ಅರ್ಥಿಕ ಮುಗ್ಗಟ್ಟಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಹೀಗಿರುವಾಗ ರೈತರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೊಂಚಮಟ್ಟಿಗೆ ಹಣದ ಬೆಳೆಗಳನ್ನು ಬೆಳೆಯದೆ ಕೇವಲ ಆಹಾರದ ಬೆಳೆಗಳನ್ನೇ ಬೆಳೆಯಲು ಹೇಗೆ ತಾನೆ ಸಾಧ್ಯ? ಆದುದರಿಂದ ಈಗಿನ ವ್ಯವಸ್ಥೆಯಿಂದ ಹೆಚ್ಚು ಜಮೀನಿರುವವರಿಗೂ ಮತ್ತು ಕೇವಲ ಹಣದ ಬೆಳೆಗಳನ್ನು ಬೆಳೆಯುವರಿಗೂ ಅನುಕೂಲವಾಗಿದೆಯಲ್ಲದೆ, ಸಾಧಾರಣ ರೈತರಿಗೆ ಖಂಡಿತವಾಗಿಯೂ ಅನುಕೂವಾಗಿಲ್ಲ ಹೀಗಿರು ವುದರಿಂದ ಹೆಚ್ಚು ಆಹಾರ ಬೆಳೆಯಲು ಸಾಧಾರಣ ರೈತನಿಗೆ ಸಾಧ್ಯವೇ ಇಲ್ಲದಂತಾಗಿದೆ.

ಸದ್ಯದ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಇದಕ್ಕಿಂತಲೂ ಉತ್ತಮವಾದ ಮಾರ್ಗವೆಂದರೆ,

ಎಷ್ಟು ಪ್ರದೇಶದಲ್ಲಿ ಹಣದ ಬೆಳೇಯನ್ನು ಬೆಳೆಯುತ್ತಾರೆಯೋ ಅದಕ್ಕೆ ಎಷ್ಟು ವಿದ್ಯುಚ್ಛಕ್ತಿ ಖರ್ಚಾಗುತ್ತದೆಂಬುದನ್ನು ಅರಿತು ಅಷ್ಟಕ್ಕೆ ಮಾತ್ರ ೦–೧–೦ ದರವನ್ನು ವಿಧಿಸಬೇಕು. ಯಾವ ಬೆಳೆಗೆ ಎಷ್ಟು ನೀರು ಬೇಕು ಆ ನೀರೆತ್ತಲು ಎಷ್ಟು ವಿದ್ಯುಚ್ಛಕ್ತಿ ಅವಶ್ಯಕವೆಂಬುದನ್ನು ಈಗಾಗಲೇ ಗೊತ್ತು ಹಚ್ಚಿರುವುದರಿಂದ ಅದಕ್ಕೆ ತಕ್ಕಷ್ಟು ಹಣವನ್ನು ವಿಧಿಸಬಹುದು. ಆದರೆ ಇದಕ್ಕೆ ಹೆಚ್ಚು ಶ್ರಮವಹಿಸಬೇಕಾಗುತ್ತದೆ. ವಿದ್ಯುಚ್ಛಕ್ತಿ ಒದಗಿಸಲು ಇಲಾಖೆಯವರಿಗೆ ಖರ್ಚಾಗುವ ಮೊತ್ತ ತುಂಬಾ ದುಬಾರಿಯಾಗಿರುವುದರಿಂದ ರೈತರಿಗೆ ಶೇಕಡ ೫–೦–೦ ಮಿನಿಮಂ ವಿಧಿಸುತ್ತಿದ್ದಾರೆ ಇದೇ ಕೊಂಚ ದೂರದಲ್ಲಿರುವ ಹಳ್ಳಿಗಾಡಿನವರಿಗೆ ದುಬಾರಿಯಾಗಿರುವಾಗ ಇನ್ನು ಶೇಕಡ ೧೦–೦–೦ ವಿಧಿಸಿದರೆ, ರೈತನ ಪಾಡೇನು? ಪರೋಕ್ಷವಾಗಿ ಇದು ರೈತನನ್ನು ನಿರುತ್ಸಾಹಿಯನ್ನಾಗಿ ಮಾಡುತ್ತದೆ. ವಿದ್ಯುಚ್ಛಕ್ತಿ ಇರುವ ಊರುಗಳ ಹತ್ತಿರ ಕೆಲವರಿಗೆ ಅಷ್ಟು ಹೆಚ್ಚು ತೊಂದರೆಯಾಗದಿದ್ದರೂ, ಸ್ವಲ್ಪ ಹೆಚ್ಚು ದೂರದಲ್ಲಿರುವವರಿಗೆ ತುಂಬಾ ತೊಂದರೆಯಾಗಿದೆ. ಇದರಿಂದ ಯಾವ ಊರಿನ ಹತ್ತಿರ ವಿದ್ಯುಚ್ಛಕ್ತಿ ಇದೆಯೋ ಅದೇ ಊರಿನವರಿಗೆ ಮಾತ್ರ ಪ್ರಯೋಜನಕಾರಿಯಾಗಿದೆಯಲ್ಲದೆ, ಬೇರೆ ಊರಿನವರಿಗೆ ಪ್ರಯೋಜನವಿಲ್ಲ. ಆಹಾರದ ಬೆಳೆಗಳಿಗೆ ವಿದ್ಯುಚ್ಛಕ್ತಿಯನ್ನು ಉಚಿತವಾಗಿ ಒದಗಿಸಿದರೆ ಹೆಚ್ಚು ಆಕರ್ಷಣೀಯವಾಗಿ ಕಂಡು ಜನರೆಲ್ಲಾ ಆಹಾರದ ಬೆಳೆಗಳನ್ನು ಬೆಳೆಸಲೆತ್ನಿಸಬಹುದು. ಜೊತೆಗೆ ಈಗ ಚಾಲ್ತಿಯಲ್ಲಿರುವ ಶೇಕಡ ೫–೦–೦ ಮಿನಿಮಂ ಚಾರ್ಜನ್ನು ಇನ್ನೂ ಕಡಿಮೆ ಮಾಡುವುದರಿಂದ ಮತ್ತಷ್ಟು ಉತ್ತೇಜನಕರವಾಗಿರುತ್ತದೆ. ಹಳಬರು ಹಣದ ಬೆಳೆಗಳನ್ನು ಬೆಳೆದರೂ ಅಥವಾ ಆಹಾರದ ಬೆಳೆಗಳನ್ನು ಬೆಳೆಯದೆ ಇದ್ದರೂ ಸಹ ರಿಯಾಯಿತಿ ತೋರಿಸಿ ಹೊಸಬರಿಗೆ ಮಾತ್ರ ಹೆಚ್ಚಾಗಿ ವಿಧಿಸಿರುವುದು ಸರಿಯಲ್ಲ. ಹೊಸಬರೂ ಹಳಬರಂತೆ ಹಣದ ಬೆಳೆಗಳನ್ನು ಮೊದಲಿನಿಂದಲೂ ಬೆಳೆಯುತ್ತಿದ್ದಾರೆಂಬುದನ್ನು ಮರೆಯಲಾಗದು.

ಘನ ಸರ್ಕಾರದವರ ಉದ್ದೇಶ ಹೆಚ್ಚು ಆಹಾರ ಬೆಳೆಯುವಂತಾಗಲೆಂಬುದೇ ಆಗಿರುವುದರಿಂದ ರೈತರಿಗೆ ಬೆಳೆಯಲು ತಕ್ಕ ಸೌಖರ್ಯಗಳನ್ನುಂಟುಮಾಡಿಕೊಡುವುದು ಅತ್ಯಾವಶ್ಯಕ.

೧. ಆಹಾರದ ಬೆಳೆಗಳನ್ನು ಮಾತ್ರ ಬೆಳೆಯುವವರಿಗೆಲ್ಲಾ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು.

೨. ಆಹಾರದ ಬೆಳೆಗಳೊಂದಿಗೆ ಇತರ ಬೆಳೆಗಳನ್ನೂ ಬೆಳೆಯುವವರಿಗೆ ಯೂನಿಟ್ಟಿಗೆ ೦–೦–೬ ವಿಧಿಸುವುದು ಮಿನಿಮಂ ಚಾರ್ಜು ಶೇ. ೫/– ವಿಧಿಸಬೇಕು.

೩. ಆಹಾರದ ಬೆಳೆಗಳನ್ನು ಬೆಳೆಯದೆ ಕೇವಲ ಹಣದ ಬೆಳೆಗಳನ್ನು ಬೆಳೆಯುವವರಿಗೆ ಯೂನಿಟ್ಟಿಗೆ ೦-೧-೦ ಯಂತೆಯೂ ವಿಧಿಸುವುದಲ್ಲದೆ ಮಿನಿಮಂ ಚಾರ್ಜು ಶೇ ೧೦/- ರಂತೆ ವಿಧಿಸಬೇಕು. ಅಥವಾ ಆಹಾರದ ಬೇಳೆಗಳನ್ನು ಬೆಳೆಯದವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸದೆ ಇರುವುದು ಇದರಲ್ಲಿ ಹಳಬರು ಹೊಸಬರೆಂಬ ಬೇಧವೇ ಇರಬಾರದು.

ಮೇಲ್ಕಂಡ ರೀತಿ ಸೌಲಭ್ಯಗಳನ್ನು ಕೊಡುವುದರಿಂದ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ. ಆದುದರಿಂದ ಘನ ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸಿ ರೈತರಿಗೆ ಉತ್ತೇಜನಕಾರಿಯಾಗಿರುವಂತಹ ಮತ್ತು ಹೆಚ್ಚು ಆಹಾರ ಬೆಳೆಯಲು ಸಹಕಾರಿಯಾಗುವಂತಹ ಏರ್ಪಾಡನ್ನು ಮಾಡಬೇಕು.

ವಿದ್ಯುಚ್ಛಕ್ತಿ ಒದಗಿಸಲಾಗದ ಜಾಗಗಳಲ್ಲಿ ಸಾಧ್ಯವಾದಷ್ಟು ಆಯಿಲ್ ಎಂಜಿನ್‌ಗಳ ಮೂಲಕ ಬೇಸಾಯಮಾಡುವಂತೆ ಪ್ರೋತ್ಸಾಹಿಸಬೇಕು. ಅನೇಕರಿಗೆ ಮೇಲ್ಕಂಡ ಯಂತ್ರಗಳನ್ನು ಕೊಳ್ಳಲು ಶಕ್ತಿಯಿಲ್ಲದೆ ಉಳಿದ ಅನುಕೂಲಗಳಿದ್ದರೂ ಸಹ ಕಾಲಹರಣ ಮಾಡುತ್ತಿರುವುದರಿಂದ, ಅಂತವರಿಗೆ ಸರ್ಕಾರದವರೇ ಯಂತ್ರಗಳನ್ನು ಒದಗಿಸಿ ಕಾಲಕ್ರಮೇಣ ಅವರಿಂದ ವಸೂಲು ಮಾಡಿಕೊಳ್ಳಬೇಕು, ಕೆಲವು ಕಡೆ ಕುಡಿಯುವ ನೀರಿನ ಅಭಾವವುಂಟಾಗುವುದನ್ನು ತಪ್ಪಿಸಲು ಬೋರ್ವೆಲ್‌ಗಳನ್ನು ತೆಗೆಸುವುದು ಉಚಿತವಾಗಿರುತ್ತದೆ. ಇದರಿಂದ ಜನಗಳಿಗೂ, ದನಕರುಗಳಿಗೂ ಸಹ ನೀರಿನ ಕೊರತೆ ತಪ್ಪಿದಂತಾಗುತ್ತದೆ.

ಜೊತೆಗೆ ಜನರೂ ಸಹ ಆಹಾರದ ಬೆಳೆಗಳನ್ನು ಬೆಳೆಯಲು ತ್ರಿಕರಣ ಶುದ್ಧಿಯಾಗಿ ಪ್ರಯತ್ನಿಸಬೇಕದುದು ಅವಶ್ಯಕತೆಯ ದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ. ಇದು ಮಾತಿನ ಕಾಲವಲ್ಲ ಕೆಲಸದ ಕಾಲವೆಂಬುದನ್ನು ಎಲ್ಲರೂ ಗ್ರಹಿಸಬೇಕು. ಆಲಸ್ಯಂ ಅಮೃತಂ ವಿಷಂ ಎಂಬ ನಾಣ್ಣುಡಿಯನ್ನು ಜ್ಞಾಪಿಸಿಕೊಂಡು ಕೂಡಲೇ ಹೆಚ್ಚು ಆಹಾರ ಬೆಳೆಯುವ ಕೆಲಸಕ್ಕೆ ಕೈ ಹಚ್ಚುವುದು ನಮ್ಮಲ್ಲಿ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಕಷ್ಟಕಾಲದಲ್ಲಿ ಎದೆಗುಂದದೆ ಧೈರ್ಯ ಸಾಹಸ ತಾಳ್ಮೆಗಳನ್ನು ತೋರಿಸಿ ದೇಶದಲ್ಲುಂಟಾಗುವ ಆಹಾರದ ಅಭಾವವನ್ನು ಹೋಗಲಾಡಿಸಲೆತ್ನಿಸುವುದು ನಮ್ಮಗಳಲ್ಲೆರ ಧರ್ಮವೆಂದರಿಯಬೇಕಲ್ಲದೆ ಸುಮ್ಮನೆ ಕೈಕಟ್ಟಿ ಕೂತುಕೊಳ್ಳಬಾರದು. ಒಗ್ಗಟ್ಟಿನಿಂದ ಕೆಲಸ ಮಾಡಲೆತ್ನಿಸಬೇಕು ಇದರಿಂದ ಎಷ್ಟೋ

ಅಸಾಧ್ಯವಾದ ಕೆಲಸಗಳು ಸುಲಭವಾಗಿ ನೆರವೇರುತ್ತವೆ.

ಮೇಲ್ಕಂಡ ರೀತಿಯಲ್ಲಿ ಜನಸಾಮಾನ್ಯರೆಲ್ಲಾ ಪ್ರಯತ್ನಿಸಿದರೆ ಮತ್ತು ಅದಕ್ಕನುಸಾರವಾಗಿ ಘನ ಸರ್ಕಾರದವರು ಸೌಲಭ್ಯಗಳನ್ನು ಕೇಳಿದ ಕೂಡಲೇ ಒದಗಿಸದಿದ್ದರೆ ನಮ್ಮ ಆಹಾರದ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು. ಇದು ಕಷ್ಟ ಕಾಲವಾದುದರಿಂದ ಖರ್ಚಾಗುವ ಹಣವನ್ನಾಗಲಿ ಅಥವಾ ಶ್ರಮವನ್ನಾಗಲಿ ಲಕ್ಷಿಸಬಾರದು. ಕಷ್ಟ ಬಂದಾಗ ನಷ್ಟವೇ ಹೆಚ್ಚು ಎಂಬುದನ್ನು ಮರೆಯಬಾರದು.

# ಜಡತ್ವ ತೊಲಗುವುದು ಅವಶ್ಯಕವಲ್ಲವೆ?

ಗ್ರಾಮಗಳಲ್ಲಿರತಕ್ಕ ರೈತಾಪಿ ಜನಗಳಲ್ಲಿ ಜಡತ್ವ ಹೋಗಿ ತಿಳುವಳಿಕೆ ಬಂದುದಲ್ಲದೆ ಅವರ ಅಭಿವೃದ್ಧಿಗಾಗಿಯೇಕೈಗೊಂಡಿರುವಕಾರ್ಯಗಳು,ಯಾವೂಫಲಕಾರಿಯಾಗಿರುವುದಿಲ್ಲವೆಂಬುದಾಗಿ ಮೇಧಾವಿಗಳು ಹೇಳತಕ್ಕ ಮಾತುಗಳು ಸತ್ಯವೇ ಸರಿ.

ಗ್ರಾಮಸ್ಥರಲ್ಲಿ ವಿದ್ಯಾವಂತರೇ ವಿರಳ. ಪ್ರಾಥಮಿಕ ವಿದ್ಯಾಭ್ಯಾಸ ಮಾಡಿರತಕ್ಕವರು ಅಲ್ಲಲ್ಲಿ ಇದ್ದರೂ ಸಹ ಅದನ್ನು ಬೆಳೆಸಲು ಯತ್ನಿಸಿದವರು ತುಂಬಾ ಅಪರೂಪ ಹಳ್ಳಿಗಾಡುಗಳಲ್ಲಿ ಬಡವರ ಸಂಖ್ಯೆ ಹೆಚ್ಚು. ವ್ಯವಸಾಯವೇ ಪ್ರಾಧಾನ್ಯವಾದ ನಮ್ಮ ದೇಶದಲ್ಲಿ ಊರಿಗೊಂದು ಪಾಠಶಾಲೆಯಾದರೂ ಊರಿನವರೆಲ್ಲಾ ವಿದ್ಯಾವಂತರಾಗುವಂತಿಲ್ಲವೆಂಬ ಸಂಶಯ ಬಂದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲವೆನ್ನಬಹುದು. ಬಹುಭಾಗದ ಹುಡುಗರು ಪಾಠಶಾಲೆಗೆ ಹೋಗುವುದಕ್ಕೆ ಪ್ರತಿಯಾಗಿ ತಮ್ಮ ತಂದೆತಾಯಿಗಳಿಗೆ ಸಹಾಯಮಾಡಲು ಹೋಗಬೇಕಾಗುವ ಪ್ರಸಂಗಗಳು ಒದಗಿ ಬರುತ್ತವೆ. ಇದನ್ನು ಗಮನಿಸದೆ ಸುಮ್ಮನೆ ಪಾಠಶಾಲೆಗಳ ಸಂಖ್ಯೆ ಹೆಚ್ಚಿಸುವುದು ಪ್ರಯೋಜನವಿಲ್ಲವೆಂಬ ಸಂಶಯ ದೇಶದ ಮುಖಂಡರನ್ನು ಬಾಧಿಸುತ್ತಿರುವಾಗ ಅದರಲ್ಲಿ ಸತ್ಯವಿಲ್ಲವೆಂದು ಹೇಳಲಾಗುವುದಿಲ್ಲ. ವಯಸ್ಕರು ಕಲಿಯಲು ರಾತ್ರಿಯವೇಳೆ ಪಾಠಶಾಲೆಗಳನ್ನು ಏರ್ಪಡಿಸಿದ್ದರೂ ಸಹ, ಹಳ್ಳಿಗಾಡಿನ ವಯಸ್ಕರು ತಮ್ಮ ಜಡತ್ವವನ್ನು ಅಲ್ಲೂ ಪ್ರದರ್ಶಿಸಲು ಹಿಂಜರಿದಿಲ್ಲ.

ಮುಖ್ಯವಾಗಿ ಹಳ್ಳಿಯವರ ಜಡತ್ವ ತೊಲಗಬೇಕಾದರೆ ತಿಳುವಳಿಕೆಯೇ ಮುಖ್ಯವೆನ್ನಬಹುದು. ತಿಳುವಳಿಕೆ ಇಲ್ಲದವರಿಗೆ ಎಷ್ಟು ಹೇಳಿದರೂ ಕಲ್ಲಿನ ಮೇಲೆ ಮಳೆ ಸುರಿದ ಹಾಗೆಯೇ ಸರಿ. ಆಹಾರ ಹೊಟ್ಟೆಗೆ ಸೇರಿಸುವುದರಿಂದಲೇ ದೇಹಕ್ಕೆ ಪೋಷಣೆಯಾಗುವುದಿಲ್ಲ ಅದು ಜೀರ್ಣವಾಗಿ ರಕ್ತಗತವಾಗಬೇಕು. ಹಾಗೆಯೇ ಹೇಳಿದ್ದನ್ನು ಅನುಸರಿಸಬೇಕಾದರೆ ವಸ್ತುರೂಪ ಮೊದಲು ಅಗತ್ಯ. ನಂತರ ಹೆಸರು, ವರ್ಣನೆ, ಬೀಜವು ಮೊಳತು ಗಿಡವಾಗಬೇಕಾದರೆ ಮಣ್ಣು, ನೀರು ಗಾಳಿ, ಬೆಳಕುಗಳು ಹೇಗೆ ಸರಿಯಾದ ಕಾಲಕ್ಕೆ, ಸರಿಯಾದ ಪ್ರಮಾಣದಲ್ಲಿ ಅವಶ್ಯಕವೋ ಹಾಗೆಯೇ ನಮ್ಮ ಜನಕ್ಕೆ ತಿಳುವಳಿಕೆ ಬರಬೇಕಾದರೆ ಕ್ರಮವಾದ ಏರ್ಪಾಡುಗಳಾಗಬೇಕು. ಅಕ್ಷರಾಭ್ಯಾಸ ಸುಧಾರಕರು ಮೊದಲಾದವರುಗಳ ಅವಶ್ಯಕತೆಯನ್ನೇ ಅನೇಕರು ಅರ್ಥಮಾಡಿಕೊಂಡಿಲ್ಲ. ಅಂದಮೇಲೆ, ಬರೆಯುವುದು, ಓದುವುದು ಪ್ರಯೋಜನವಿಲ್ಲವೆಂಬುದಾಗಿ ಹೇಳುವ ಹಾಗಿಲ್ಲ. ಜನಗಳಲ್ಲಿರತಕ್ಕ ಜಡತ್ವ ತೊಲಗಿಸಲು ಮುಖ್ಯವಾದ ಚಿಕಿತ್ಸೆಯೆಂದರೆ, ತಿಳುವಳಿಕೆ ಬರುವಂತೆ ಮಾಡುವುದು, ಕಣ್ಣಿನಿಂದ ನೋಡಿ ಕಿವಿಯಿಂದ ಕೇಳುವುದು, ತಿಳುವಳಿಕೆ ಹೊಂದಲು ಪ್ರಥಮ ಪ್ರಯತ್ನಗಳು.

ಸಾರ್ವಜನಿಕ ಮತ್ತು ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಪಟ್ಟ ಚಿತ್ರಪಠಗಳು, ವಿದ್ಯಾಭ್ಯಾಸ, ಸಹಕಾರ, ವ್ಯವಸಾಯ, ಕೈಗಾರಿಕೆಗಳು, ಇವೇ ಮೊದಲಾದುವುಗಳಲ್ಲಿ ತಿಳಿಯಬೇಕಾದ ವಿಷಯಗಳು, ಬೇರೆದೇಶದ ಜನರ ಸ್ಥಿತಿ ನಮ್ಮ ಸ್ಥಿತಿ ಅಭಿವೃದ್ಧಿಯಾಗಬೇಕಾದರೆ ಆಚರಣೆಗೆ ತರತಕ್ಕ ಕೆಲಸಗಳು, ಇವೇ ಮೊದಲಾದ ಮುಖ್ಯ ವಿಷಯಗಳ ಚಿತ್ರಪಠಗಳನ್ನು ತೋರಿಸಿ ಅವುಗಳ ಸಂಬಂಧವಾಗಿ ವಿವರಣೆ ಮಾಡುವ ಕೆಲಸ ತುಂಬಾ ಅಗತ್ಯ. ಎಷ್ಟೋ ಮುಂದುವರಿದಿರುವ ಅಮೆರಿಕಾ ಖಂಡ ಮೊದಲಾದವುಗಳಲ್ಲೇ ಇಂತಹ ಅಭ್ಯಾಸ ಈಗಲೂ ಬಳಕೆಯಲ್ಲಿರುವಾಗ ಇನ್ನೂ ಹಿಂದುಳಿದಿರುವ ನಮ್ಮ ದೇಶದಲ್ಲಿ ಇದರ ಅವಶ್ಯಕತೆ ಎಷ್ಟೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಪದೇ ಪದೇ ಇಂತಹ ನೋಟ ಮತ್ತು ವಿವರಣೆಗಳಿಂದ ಜನಸಾಮಾನ್ಯರು ತಮ್ಮ ಜಡತ್ವವನ್ನು ಕಳೆದುಕೊಳ್ಳಬಹುದು. ಈ ರೀತಿಯಾದ ಏರ್ಪಾಡುಗಳಿದ್ದರೆ ಜನರೆಲ್ಲಾ ಉತ್ಸಾಹದಿಂದ ನೋಡಲು ಬಂದು ನೆರೆಯುತ್ತಾರೆ. ಈಗಿರುವಂತಹ ಸ್ಥಿತಿಯಲ್ಲಿ ಮಕ್ಕಳು, ಹೆಂಗಸರು, ಗಂಡಸರು ಎಲ್ಲರೂ ಸೇರುವ ರೂಢಿಯೇ ಇಲ್ಲ ಇವರೆಲ್ಲಾ ಒಟ್ಟಿಗೆ ಸೇರದೆ, ಜಡತ್ವ ತೊಲಗಲು ಸಾಧ್ಯವೂ ಇಲ್ಲ ಉಪನ್ಯಾಸಗಳಿಗಿಂತ ಉತ್ತಮವಾದ ವಿಧಾನವೇಂದರೆ ಚಿತ್ರಪಠಗಳನ್ನು ತೋರಿಸುವುದು.

ಇಷ್ಟೇ ಅಲ್ಲದೆ ಹರಿಕಥೆ, ರಾಮಾಯಣ, ಭಾರತಪಠಣಗಳೂ ಅವಶ್ಯಕ. ಇದರ ಜೊತೆಗೆ ಗ್ರಾಮ ಸಂಘಗಳನ್ನು ಏರ್ಪಡಿಸಿ ಗ್ರಾಮದ ಅಭಿವೃದ್ಧಿಗೆ ಕಾರ್ಯ ಕೈಗೊಳ್ಳಲು ಅವಶ್ಯಕವಾದ ಚೈತನ್ಯವನ್ನು ಗ್ರಾಮಸ್ಥರಿಗೆ ತುಂಬುವುದೂ ಮುಖ್ಯ.

ಪ್ರತಿಯೊಂದು ಸಾಹಸಕ್ಕೂ ಹಣವೆಷ್ಟು ಪ್ರಾಧಾನ್ಯವೋ, ತಿಳುವಳಿಕೆಯೂ ಅಷ್ಟೇ ಪ್ರಾಧಾನ್ಯ. ಯಾವ ದೇಶದಲ್ಲಿ ಅಭಿಮಾನಶಾಲಿಗಳಾದ ವಿದ್ಯಾವಂತರು ಹೆಚ್ಚಾಗಿರುತ್ತಾರೆಯೋ ಆ ದೇಶವೇ ಬಹು ಜಾಗ್ರತೆ ಮುಂದುವರಿಯುತ್ತದೆ. ನಮ್ಮ ಸಮಾಜ ಸುಧಾರಕರೇ ಆಗಲಿ, ರಾಜಕೀಯ ಮುಂದಾಳುಗಳೇ ಆಗಲಿ, ಕೇವಲ ಕಂದಾಚಾರದ ಪ್ರಶ್ನೆಗಳಾದ ವಿಧವಾ ವಿವಾಹ ಮೊದಲಾದುವುಗಳನ್ನು ಗಮನಿಸುವುದರಿಂದಲೇ ದೇಶದ ಅಭಿವೃದ್ಧಿಯಾಗುತ್ತದೆಂಬುದನ್ನು ಮರೆತು ಬಿಡಬೇಕು. ಹಳ್ಳಿಗಾಡಿನ ಜನರೆಷ್ಟು ಜಡತ್ವವನ್ನು ಪ್ರದರ್ಶಿಸುತ್ತಿದ್ದಾರೆಯೋ ಅದೇ ಮನೋವೃತ್ತಿಯನ್ನೇ ವಿದ್ಯಾವಂತರೂ ಪ್ರದರ್ಶಿಸುತ್ತಿರುವುದು ಕೇವಲ ಶೋಚನೀಯಕರವಾದ ಸಂಗತಿ. ವಿದ್ಯಾವಂತರೆಂದು ಕರೆಸಿಕೊಳ್ಳುತ್ತಿರುವವರು, ತಮ್ಮ ಮನುಷ್ಯತ್ವವನ್ನೇ, ತಮ್ಮ ವ್ಯಕ್ತಿತ್ವವನ್ನೇ ಮರೆತು ಬಗೆಬಗೆಯ ಚಾಕರಿ ರೋಗವನ್ನು ತಲೆಗಂಟಿಸಿಕೊಂಡು, ಅವರು ಯಾರೇ ಆಗಿರಲಿ, ದುಡ್ಡಿರತಕ್ಕ ದೊಡ್ಡಪ್ಪನವರ ಅಡಿದಾವರೆಗಳ ದಾಸಾನುದಾಸರೆಂಬ, ದಾಸ್ಯಮನೋವೃತ್ತಿಯನ್ನು ಕ್ರಮವಾಗಿ ಬೆಳೆಸಿಕೊಂಡು ಬರುತ್ತಿರುವುದು ತುಂಬಾ ವ್ಯಸನಕರವಾಗಿದೆ. ಮೊದಲು ತಮ್ಮ ವ್ಯಕ್ತಿತ್ವವನ್ನು ಪಡೆಯಬೇಕು. ಸರಿಯಾದ ಅಭಿಮಾನ ಪೂರಿತವಾದ ತಿಳುವಳಿಕೆಯನ್ನು ಸಂಪಾದಿಸಬೇಕು. ನಮ್ಮ ಉದ್ಧಾರಕ್ಕೆ ನಾವೇ ಕೃಷಿಮಾಡಬೇಕು. ಹಾಗೆಯೇ ಇತರರ ಉದ್ಧಾರಕ್ಕೆ ಪ್ರಯತ್ನ ಮಾಡುವುದು ಮಾನವರಾದವರ ಕೆಲಸ. ಆದರೆ ಕೆಲಸ ನೆರವೇರುಸುವುದು ದೇವರ ಕೆಲಸ ನಮ್ಮಲ್ಲಿ ಪ್ರಜಾಮುಖಂಡರುಗಳ ಸಂಖ್ಯೆ ಬಹು ಕಡಿಮೆ, ಒಬ್ಬ ಮುಂದಾಳುವು ಅಳಿದರೆ, ಆ ಜಾಗದಲ್ಲಿ ಇನ್ನೊಬ್ಬ ಮುಂದಾಳು ಸಿಕ್ಕಬೇಕಾದರೆ ಎಷ್ಟೋ ವರ್ಷಗಳ ಪರ್ಯಂತರ ಸಾಧ್ಯವಿಲ್ಲ. ಆದರೆ ಬೇರೆ ದೇಶಗಳಲ್ಲಿ ವಿದ್ಯಾವಂತರೆಲ್ಲರೂ ಅಭಿಮಾನಿಶಾಲಿಗಳಾಗಿರುವುದರಿಂದ ಒಬ್ಬ ಮುಂದಾಳಿನ ಕೊರತೆ ಬಂದ ತಕ್ಷಣವೇ ಪ್ರತಿ ಮುಂದಾಳು ಸುಲಭವಾಗಿ ಸಿಕ್ಕುವ ಸಂಭವವಿದೆ. ಈ ಕೊರತೆ ನೀಗಬೇಕಾದರೆ ದೇಶದ ಹೆಂಗಸರು, ಗಂಡಸರು, ಮಕ್ಕಳೆಲ್ಲರೂ ಅಭಿಮಾನಶಾಲಿಗಳಾಗಿ ತಿಳುವಳಿಕೆಯುಳ್ಳವರಾಗಬೇಕು. ಜೊತೆಗೆ ವಿದ್ಯಾವಂತರಾಗಬೇಕು. ಅದಕ್ಕೆ ಜಡತ್ವವನ್ನು ತೊಲಗಿಸುವುದೇ ಮುಖ್ಯ ಉಪಾಯ.

# ರೈತರ ಸಂಘಗಳು

ಈಗಿನ ಸ್ಥಿತಿಯಲ್ಲಿ ನಮ್ಮ ದೇಶದ ಜನರ ದೃಷ್ಟಿಯೆಲ್ಲಾ ಸರ್ಕಾರದ ಮೇಲೆ ಬಿದ್ದು ಪ್ರತಿಯೊಂದು ಕೆಲಸಕ್ಕೂ ಸರ್ಕಾರದವರೇ ಸಹಾಯಮಾಡಬೇಕೆಂಬ ತಪ್ಪು ಭಾವನೆಯನ್ನು ಬೆಳೆಸುವ ಪ್ರಯತ್ನದಲ್ಲಿಯೇ ಮಗ್ನರಾಗಿದ್ದಾರೆ. ಇದರ ಜೊತೆಗೆ ಗ್ರಾಮದ ಯುವಕರಾದರೋ ವಿದ್ಯಾವಂತರಾದ ತಕ್ಷಣವೇ ಪಟ್ಟಣದ ಕಡೆ ದೃಷ್ಟಿ ತಿರುಗಿಸಿ ಹಳ್ಳಿಗಳನ್ನು ಮರೆತುಬಿಡುತ್ತಾರೆ. ಇಂತಹ ಸ್ಥಿತಿ ಇರುವುದರಿಂದಲೂ ಹಿಂದಿನ ಒಗ್ಗಟ್ಟು ಮಮತೆಗಳು ಮಾಯವಾಗಿರುವುದರಿಂದಲೂ, ಹಳ್ಳಿಯ ಜನರು ತಮ್ಮ ಊರು, ಊರಿನ ಕೆಲಸಗಳೆಂದರೆ ಸ್ವಲ್ಪವೂ ಶ್ರದ್ಧೆ ಕೊಡದೆ ಅನಾದಾರಣೆ ಮಾಡಿ ಪ್ರತಿಯೊಂದು ಕೆಲಸಕ್ಕೂ ಸರ್ಕಾರದವರ ಸಹಾಯವನ್ನೇ ಕೋರುವ ಹೀನಸ್ಥಿತಿಗೆ ಇಳಿದಿರುತ್ತಾರೆ. ಎಲ್ಲಿ ನೋಡಿದರೂ ದ್ವೇಷ, ಅಸೂಯೆ ಅಸಹಕಾರಗಳೇ ಮೂರ್ತಿವತ್ತಾಗಿರುವುದಲ್ಲದೆ, ಹಿಂದಿನ ಸ್ನೇಹ ಸೌಹಾರ್ಧತೆಗಳು ಮಾಯವಾಗಿಬಿಟ್ಟಿವೆ. ಇದೇ ಕಾರಣಗಳಿಂದಲೇ ಗ್ರಾಮಸ್ಥರ ಅಭಿವೃದ್ಧಿಗಾಗಿ ಎಷ್ಟೋ ಕಾರ್ಯಕ್ರಮಗಳು ನಡೆದಿದ್ದರೂ ಸಹ, ಗ್ರಾಮಸ್ಥರ ಸಹಕಾರವಿಲ್ಲದೆ ವ್ಯರ್ಥವಾಗಬೇಕಾಯಿತು. ಇವುಗಳೆಲ್ಲವುದರ ಅನುಭವದಿಂದ ತಿಳಿದುಬರುವುದೇನೆಂದರೆ ಜನಗಳೇ ಮುಂದೆ ಬಂದಲ್ಲದೆ ಯಾವ ಕಾರ್ಯವೂ ಯಶಸ್ವಿಯಾಗಿ ನಡೆಯಲಾರದು.

ನಮ್ಮ ಪಂಚಾಯಿತಿಗಳಿಂದ ಘನಸರ್ಕಾರದವರು ಎಣಿಸಿದಷ್ಟು ಕೆಲಸವಾಗದೆ ಇರುವುದನ್ನು ತಿಳಿದೇ ಗ್ರಾಮೋದ್ಧಾರ ಕಾರ್ಯಕ್ರಮಗಳನ್ನೊಳಗೊಂಡಿರುವ ಹೋಬಳಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆನ್ನಬಹುದು. ಹಿಂದೆ ಗ್ರಾಮಸ್ಥರ ಮೇಲ್ಮೆಗಾಗಿ ದುಡಿಯಲು ರಚಿತವಾದ ಯೂನಿಯನ್‌ಗಳು, ಬೋರ್ಡುಗಳು ಕಮಿಟಿಗಳೇ ಮೊದಲಾದುವುಗಳ ಕೆಲಸಗಳನ್ನು ನಡೆಸಲು ಇದ್ದ ಹಣದ ಅಭಾವದ ಕೊರತೆ ನಿಸ್ಸಾಹಯಭೂತವಾದ ಜವಾಬ್ದಾರಿಯುಂಟಾದುದರ ಕಾರಣಗಳಿಂದ ಜನರು ಸ್ಥಳೀಯ ಪರಿಪಾಲನೆಯಲ್ಲಿ ಸಾಕಾದಷ್ಟು ಮುಂದಾಳುತನವನ್ನು ತೋರ್ಪಡಿಸಲಿಲ್ಲವೆಂಬುದನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಈಗಿನ ಸ್ಥಿತಿಯಲ್ಲಿ ಅನೇಕ ಪಂಚಾಯ್ತಿಗಳ ಆರ್ಥಿಕ ಮಟ್ಟವು ಸಾಲದೆ ಇರುವುದರಿಂದ ಅಲ್ಲಿನ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಲು ಅಸಾಧ್ಯವಾಗಿದೆ. ಜೊತೆಗೆ ಸ್ಥಳೀಯ ಅಧಿಕಾರಿಗಳ ಮತ್ತು ಖಾಸಗಿ ಮಹನೀಯರ ಶ್ರದ್ಧೆ ಸಹಾಯ, ಅತ್ಯಾವಶ್ಯಕ. ಈಗಿನ ಸ್ಥಿತಿಯಲ್ಲಿ ಗ್ರಾಮಸ್ಥರ ಸಹಕಾರ ಸ್ವಲ್ಪ

ಮಟ್ಟಿಗೆ ಒಂದು ಗ್ರಾಮದಲ್ಲಿ ಸಿಕ್ಕಿದರೂ ಇನ್ನೊಂದು ಗ್ರಾಮದಲ್ಲಿ ಇಲ್ಲವಾಗಿದೆ. ಇದನ್ನು ಸರಿಪಡಿಸದೆ ಯಾವ ಕಾರ್ಯವೂ ಯಶಸ್ವಿಯಾಗಲಾರದೆಂಬುದಕ್ಕೆ ಹಿಂದಿನ ಅನುಭವವೇ ಸಾಕಾಗಿದೆ.

ಇದನ್ನು ಸರಿಪಡಿಸಬೇಕಾದರೆ, ಪ್ರತಿಗ್ರಾಮದಲ್ಲಿಯೂ ಗ್ರಾಮಸ್ಥರನ್ನೆಲ್ಲಾ ಒಂದುಗೂಡಿಸಿ, ಸಹಕಾರ ಹಿಂದಿನಂತೆ ಹಳ್ಳಿಗಳ ಮೇಲಿನ ಮಮತೆ, ಮೊದಲಾದವುಗಳನ್ನು ಹುಟ್ಟಿಸುವಂತಹ ಧ್ಯೇಯಗಳನ್ನುಳ್ಳ ಸಂಘ ನಿರ್ಮಾಣಗಳಿಂದಲೇ ಸಾಧ್ಯವೆನ್ನಬಹುದು. ಪ್ರತಿ ಹೋಬಳಿಯಿಂದಲೂ ಚುನಾಯಿತರಾದ ಸದಸ್ಯರನ್ನೊಳಗೊಂಡಿರುವ ಒಂದು ಡಿಸ್ಟ್ರಿಕ್ಟ್ ಸಂಘವನ್ನು ಏರ್ಪಡಿಸುವುದಲ್ಲದೆ ಡಿಸ್ಟ್ರಿಕ್ಟ್ ಸಂಘಗಳ ಸದಸ್ಯರನ್ನುಳ್ಳ ಒಂದು ಕೇಂದ್ರ ಸಂಘವನ್ನು ಏರ್ಪಡಿಸಿಕೊಳ್ಳುವುದೂ ಅವಶ್ಯಕ.

ಇಂಥ ಉಚ್ಛ ಧ್ಯೇಯಗಳನ್ನುಳ್ಳ ಸಂಘವೇ, ಸರ್ಕಾರ ಅಧಿಕಾರಿಗಳೊಂದೆಗೆ ಸಹಕರಿಸಿ, ನಾನಾ ಇಲಾಖೆಗಳ ಕೆಲಸಗಳನ್ನೂ ಮತ್ತು ತಮ್ಮ ಪುರೋಭಿವೃದ್ಧಿಗೆ ಅತ್ಯಾವಶ್ಯಕವಾದ ಇತರ ಕಾರ್ಯಕ್ರಮಗಳನ್ನೂ ಜನಸಾಮಾನ್ಯರಲ್ಲಿ ಪ್ರಚಾರಕ್ಕೆ ತರಲು ಕಾರಣವಾಗುತ್ತದೆ. ಕ್ರಮೇಣ ಅಧಿಕಾರಿಗಳ ಪ್ರೋತ್ಸಾಹದಿಂದಲೂ ಸಂಘದ ಸಹಕಾರದಿಂದಲೂ ಸರ್ಕಾರದವರ ಘನವಾದ ಉದ್ದೇಶಗಳು ನೆರವೇರುವುದರಲ್ಲಿ ಸಂಶಯವಿಲ್ಲ.

ರೈತರಿಗೆ ಸಂಘದ ಮೂಲಕ ಕೆಲಸ ಮಾಡುವುದನ್ನು ಕಲಿಸುವುದರಿಂದ ಸಹಕಾರ ಸಂಘ, ಗ್ರಾಮ ಪಂಚಾಯ್ತಿ ಮೊದಲಾದ ಸಂಸ್ಥೆಗಳಲ್ಲಿ ಸರಿಯಾಗಿ ಭಾಗವಹಿಸುವುದಲ್ಲದೆ, ಲೆಕ್ಕಾಚಾರಸ್ತರಾಗಿ ಬಾಳಬೇಕೆಂಬ ಇಚ್ಛೆ ಅವರಲ್ಲಿ ಬೇರೂರುವುದು. ಆಗ ಗ್ರಾಮಗಳೆಲ್ಲಾ ಅಂದವಾಗಿ ಕಾಣುವುದಲ್ಲದೆ ಸುಶಿಕ್ಷಿತವಾಗಿಯೂ ಸಾಲಸೋಲಗಳ ಗೊಂದಲವಿಲ್ಲದ ಜನಗಳಿಂದ ಕೂಡಿ, ನೆಮ್ಮದಿಯಾಗಿ ಮೇಲ್ತರದ ಅಂತಸ್ಥಿನ ಜೀವನ ನಡೆಸಬೇಕು. ಮುಂತಾದ ಆಕಾಂಕ್ಷೆಗಳಿಂದ, ಅವುಗಳ ನೂರಾರು ಸಮಸ್ಯೆಗಳನ್ನು ಬಿಡಿಸಲು ತಯಾರಾಗುತ್ತವೆ.

ಗ್ರಾಮ ಸಂಘಗಳು ಏರ್ಪಟ್ಟು, ಗ್ರಾಮದ ಕೆಲಸಕಾರ್ಯಗಳನ್ನು ನಡೆಸಲು, ಗ್ರಾಮ ಫಂಡನ್ನು ಕೂಡಿಡಬೇಕು. ಗ್ರಾಮದಲ್ಲಿ ಸುಗ್ಗಿಯಕಾಲದಲ್ಲಿ ನಿಗದಿಯ ಮೇಲೆ ಇಷ್ಟಿಷ್ಟೆಂದು

ದವಸ ಧಾನ್ಯಗಳನ್ನು ಕೂಡಿಸಬಹುದು ಹಬ್ಬ ಹರಿದಿನಗಳಲ್ಲಿ ಮದುವೆ, ಮೊದಲಾದ ಶುಭಕಾರ್ಯಗಳಲ್ಲಿ, ಇತರ ಹಣದ ಬೆಳೆಗಳನ್ನು ಬೆಳೆದಾಗ, ಇನ್ನೂ ಅನೇಕ ವಿಧವಾಗಿ ಹಣವನ್ನು ಕೂಡಿಸಬಹುದು. ಇದಕ್ಕಾಗಿ ರಿಸೀದಿ ಪುಸ್ತಕಗಳನ್ನಿಟ್ಟು ಕ್ರಮವಾಗಿ ಪುಸ್ತಕಗಳಲ್ಲಿ ಬರೆದಿಟ್ಟು ಹಣವನ್ನು ಮಾತ್ರ ಖಜಾನೆಯಲ್ಲಿಯೋ ಅಥವಾ ಇನ್ನಾವದಾದರೂ ಬ್ಯಾಂಕ್, ಸೊಸೈಟಿ ಮೊದಲಾದುವುಗಳಲ್ಲಿಟ್ಟು, ಕೆಲಸಗಳನ್ನು ನಡೆಸಬಹುದು.

ಹಿಂದಿನ ಕಾಲದ ಜನರು, ಅನೇಕ ವಿಷಯಗಳಲ್ಲಿ ನಮಗಿಂತಲೂ ಹಿಂದುಳಿದಿದ್ದರೂ, ಒಟ್ಟಿನಲ್ಲಿ ಅವರಿಗೆ ತಿಳಿದಿದ್ದಷ್ಟನ್ನು ಕಾರ್ಯರೂಪಕ್ಕೆ ತಂದಿದ್ದರು. ಈಗಲಾದರೋ ವಿಷಯಗಳಿಗೆ ಅಭಾವವಿಲ್ಲವಾದರೂ, ಕಾರ್ಯಗಳನ್ನು ಕೈಗೊಂಡಿಲ್ಲ. ಮುಂದಿನ ಪೀಳಿಗೆಯ ಏಳಿಗೆಯ ಕಡೆ ಲಕ್ಷವೇ ಇಲ್ಲ. ಹಿಂದಿನ ಕಾಲದವರಲ್ಲಿದ್ದ ಒಗ್ಗಟ್ಟು, ಶಿಷ್ಟಾಚಾರಗಳೇ ಅವರ ಅಭಿವೃದ್ಧಿಗೆ ತಳಹದಿಯಾಗಿದ್ದವೆನ್ನಬಹುದು.

ಆದುದರಿಂದ ಪ್ರತಿಗ್ರಾಮದಲ್ಲಿಯೂ ಗ್ರಾಮ ಸಂಘಗಳನ್ನು ಏರ್ಪಡಿಸುವುದು ಉತ್ತಮವಾಗಿದೆ. ಜೊತೆಗೆ ತಾಲ್ಲೂಕಿನಲ್ಲಿರುವ ವಿದ್ಯಾವಂತರನ್ನೆಲ್ಲಾ ಒಟ್ಟುಗೂಡಿಸುವ ಮತ್ತು ಪ್ರತಿಗ್ರಾಮ ಸಂಘದಿಂದಲೂ ಸದಸ್ಯರನ್ನೊಳಗೊಂಡಿರುವ ಒಂದು ಸಂಘವು ಏರ್ಪಾಡಾದರೆ ಪ್ರತಿಗ್ರಾಮ ಸಂಘದ ಕೆಲಸವನ್ನೂ ಉತ್ತಮಪಡಿಸಬಹುದಲ್ಲದೆ ತಾಲ್ಲೂಕಿನ ರೈತರ ಅಭಿವೃದ್ಧಿಗೆ ನಾನಾ ವಿಧವಾಗಿ ದುಡಿಯಬಹುದು. ಇದನ್ನು ವಿದ್ಯಾವಂತರಾದ ರೈತರೂ ಮತ್ತು ಸರ್ಕಾರದವರೂ ಅರಿತುಕೊಂದು ಶೀಘ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಇದಕ್ಕಿಂತಲೂ ಸುಸಮಯ ಬೇರೆ ಸಿಕ್ಕಲಾರದು. ಗ್ರಾಮ ಸುಧಾರಕರು ಮತ್ತು ಪ್ರಜಾ ಮುಖಂಡರು ಈ ಸಂಘಗಳನ್ನು ಏರ್ಪಡಿಸಲು ಜನರನ್ನು ಪುಸಲಾಯಿಸಬಹುದು.

# ರೈತರ ಶಿಕ್ಷಣ ಕೇಂದ್ರಗಳು

ಪ್ರತಿಯೊಬ್ಬ ರೈತನೂ ಧರ್ಮಯುತನಾಗಿಯೂ ಮತ್ತು ಆರ್ಥಿಕ ಪರಿಪೂರ್ಣತೆಯಿಂದಲೂ ಸರಿಯಾಗಿ ಬಾಳಲು ಎಷ್ಟು ತಿಳುವಳಿಕೆಯನ್ನು ಪಡೆಯಬೇಕೋ, ಯಾವ ಯಾವ ಕಸಬನ್ನು ಅವಲಂಬಿಸಬೇಕೋ, ಬಾಳಿ ಬದುಕಲು ಯಾವ ನೀತಿ ನಿಯಮಗಳನ್ನು ಆಚರಿಸಬೇಕೋ, ಇವೇ ಮೊದಲಾದುವುಗಳ ಮಾಹಿತಿಯನ್ನು ಪಡೆಯುವುದಲ್ಲದೆ, ಅವುಗಳೆಲ್ಲವನ್ನೂ ಆಚರಣೆಯಲ್ಲಿ ತರಲು ತಕ್ಕ ಶಿಕ್ಷಣವನ್ನು ಪಡೆಯುವಂತಾಗಬೇಕು. ರೈತರ ಶಿಕ್ಷಣ ಕೇಂದ್ರಗಳ ನಿರ್ಮಾಣವೇ ಇಂತಹ ಶಿಕ್ಷಣವನ್ನು ದೊರಕಿಸಿ ಕೊಡಲು ತಕ್ಕ ಉಪಾಯ. ಕೇಂದ್ರಗಳಲ್ಲಿ ಕಲಿತು ಸ್ವತಂತ್ರವಾಗಿ ಕೆಲಸಕಾರ್ಯಗಳನ್ನು ಮಾಡಲು, ಸಂಸಾರ ಹೂಡಲು, ವ್ಯವಹಾರ ನಡೆಸಲೂ ಸಹ ಯಾವ ಅನುಮಾನವೂ ಈಗಿನ ವಿದ್ಯಾವಂತರುಗಳಿಗೆ ಇರುವಂತೆ ಇರಬಾರದು. ನಾಗರಿಕ ಮನುಷ್ಯನಾಗಿ ಬಾಳಲು ಎಷ್ಟು ತಿಳುವಳಿಕೆ ಅಗತ್ಯವೋ, ಅಷ್ಟನ್ನು ಪಡೆದಿರಬೇಕು. ಈಗ ನಾವು ನೋಡುವಂತೆ ವ್ಯವಸಾಯ ಶಿಕ್ಷಣವನ್ನಾಗಲೀ ಬೇರೆ ಯಾವ ಶಿಕ್ಷಣವನ್ನಾಗಲಿ ಪಡೆದಿರುವ ವಿದ್ಯಾರ್ಥಿಗಳಿಗೆ, ಸ್ವತಂತ್ರ ಜೀವನ ನಡೆಸಲು ಇರುವ ತೊಂದರೆಗಳು, ಒಂದೂ ತಲೆದೋರಬಾರದು. ತಾವು ಕಲಿತ ವಿದ್ಯೆಯಿಂದಲೇ ಜೀವಿಸಲೆತ್ನಿಸಬೇಕಲ್ಲದೆ, ಈಗ ನಾವು ನೋಡುವಂತೆ ವ್ಯವಸಾಯ ಶಿಕ್ಷಣ ಪಡೆದವರು ರೈಲ್ವೆ ಇಲಾಖೆಯಲ್ಲಾಗಲೀ, ಕಂಪೆನಿಗಳಲ್ಲಾಗಲ್ಲಿ, ದುಡಿಯುವುದಕ್ಕೆ ಹೋಗದೆ ನೇರವಾಗಿ ತಾವು ಪಡೆದಿರುವ ವಿದ್ಯೆಯ ಪೂರ್ಣ ಪ್ರಯೋಜನವನ್ನು ಪಡೆಯುವಂತಾಗಿ ಆದರ್ಶ ರೈತರಾಗಿ ಬಾಳಬೇಕು. ಜೀವನವನ್ನು ಸುಗಮವಾಗಿ ನಡೆಸುವಂತಹ ಆಕಾಂಕ್ಷೆ ಉತ್ಪನ್ನವಾಗಬೇಕು. ರೈತರು ಅಭಿವೃದ್ಧಿಗೆ ಬರಬೇಕಾದರೆ, ರೈತರ ಮಕ್ಕಳಿಗೆ ಯೋಗ್ಯವಾದ ಉಚ್ಚ ಶಿಕ್ಷಣ ಸುಲಭವಾಗಿ ದೊರೆಯುವಂತಾಗಬೇಕು. ಈಗ ವ್ಯವಸಾಯ ಶಿಕ್ಷಣ ಪಡೆದ ರೈತರ ಮಕ್ಕಳು ಅಲ್ಪ ಸಂಖ್ಯೆಯಲ್ಲಿ ಜಮೀನುಗಳ ಕೆಲಸದ ಮೇಲೆ ತೊಡಗಿದ್ದರೂ ಸಹ, ಸ್ವಂತವಾಗಿ ಕಷ್ಟಪಟ್ಟು ಕೆಲಸ ಮಾಡಲಾರದ ಸ್ಥಿತಿಯಲ್ಲಿರುವುದನ್ನು ನೋಡಿದರೆ ಈಗಿನ ವಿದ್ಯಾಭ್ಯಾಸ ಕ್ರಮವೇ ಇದಕ್ಕೆ ಮುಖ್ಯ ಕಾರಣವೆಂದು ಹೇಳಬಹುದು. ಇಂತಹ ಪುಸ್ತಕ ಪಾಠಗಳನ್ನು ಕಲಿತ ಆಧುನಿಕ ರೈತನಿಗೆ ಸಾಧಕಗಳಿಗಿಂತಲೂ, ಬಾಧಕಗಳೇ ಹೆಚ್ಚು. ಮೈಸೂರು ರೈತರ ಮಕ್ಕಳ ಯೋಗಕ್ಷೇಮದಲ್ಲಿ ತೊಡಗಿರುವವರೆಲ್ಲರೂ ಮೊದಲು ಈ ದುರವಸ್ಥೆಯನ್ನು ಹೋಗಲಾಡಿಸಲು ಸಂಪೂರ್ಣ ಮನಸ್ಸು ಮಾಡಬೇಕು.

ರೈತರ ಮಕ್ಕಳು ಸರ್ಕಾರಿ ನೌಕರಿಗಳನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕಲಿಯುವುದನ್ನು ತಪ್ಪಿಸಿ ತಾವು ಪಡೆದ ವಿದ್ಯೆಯಿಂದಲೇ ಪ್ರವರ್ಧಮಾನಕ್ಕೇ ಬರಬೇಕಲ್ಲದೆ, ಆದರ್ಶ ರೈತರಾಗಿ ಬಾಳಿ, ಮಾದರಿ ಮೈಸೂರಿನ ಕೀರ್ತಿಯನ್ನು ಬೆಳಗಿಸಲು ತಕ್ಕ ಶಕ್ತಿವಂತರಾಗಲೆತ್ನಿಸಬೇಕು. ಹೀಗಾಗಬೇಕಾದರೆ ರೈತರ ಮಕ್ಕಳು ಕಲಿಯಲು ಕೇವಲ ಸ್ಕೂಲು ಕಾಲೇಜುಗಳೇ ಆಶ್ರಯ ಸ್ಥಾನಗಳಾಗಬಾರದು. ಈಗಿನ ಶಿಕ್ಷಣ ಪದ್ಧತಿಯನ್ನು ಬದಲಾಯಿಸಬೇಕಾದದ್ದು ಅತಿ ಮುಖ್ಯ. ನಮ್ಮ ದೇಶದಲ್ಲಿ ಬಹುಭಾಗದವರೆಲ್ಲಾ ರೈತರೇ ಆಗಿರುವುದರಿಂದ ಹಳ್ಳಿಗಾಡುಗಳಲ್ಲಿರುವವರ ವಿದ್ಯಾಭ್ಯಾಸ ಕ್ರಮವನ್ನು ಅವರ ಅನುಕೂಲತೆಗೆ ತಕ್ಕಂತೆ ಬದಲಾಯಿಸುವುದು ರೈತರ ಹಿತದೃಷ್ಟಿಯಿಂದ ಒಳ್ಳೆಯದು. ಹೀಗೆ ಪಾಠಕ್ರಮಗಳನ್ನು ಬದಲಾಯಿಸಿದ ಶಾಲೆಗಳಲ್ಲಿ ಕಲಿತು ತಕ್ಕ ಮಟ್ಟಿಗೆ ಶಾಸ್ತ್ರ ಸಂಬಂಧ ಪಟ್ಟ ಕ್ಲಿಷ್ಟ ವಿಷಯಗಳನ್ನು ಅರಿತುಕೊಳ್ಳುವುದೊಳ್ಳೆಯದು. ನಂತರ ಶಿಕ್ಷಣ ಕೇಂದ್ರಗಳಲ್ಲಿ ಶಿಕ್ಷಣವನ್ನು ಪಡೆಯುವಂತಾಗಬೇಕು. ಹೆಚ್ಚು ಅನುಭವ ಮತ್ತು ಪ್ರಪಂಚ ಜ್ಞಾನ ಸಂಪಾದಿಸಿದ ಮೇಲೆ ತಮಗನುಕೂಲವಾದ ಕಸಬು, ಉಪಕಸಬುಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಶಿಕ್ಷಣ ಕೇಂದ್ರಗಳಲ್ಲಿ ಕಸಬು ಉಪಕಸಬೇ ಅಲ್ಲದೆ, ಆರ್ಥಿಕ, ಸಾಮಾಜಿಕ, ನೈರ್ಮಲ್ಯ, ಆರೋಗ್ಯ, ಸಹಕಾರ ಇವೇ ಮೊದಲಾದ ರೈತರಿಗೆ ಸಂಬಂಧಪಟ್ಟ ಸಕಲ ವಿಷಯಗಳನ್ನೂ ತಿಳಿಸುವುದಲ್ಲದೆ, ಸ್ವತಂತ್ರರಾಗಿ ಬಾಳಲು ಆತಂಕಗಳಿಲ್ಲದಂತಹ ಶಿಕ್ಷಣವನ್ನು ಕೊಡುವಂತಾಗಬೇಕು.

ರೈತರ ಕಸಬು, ಉಪಕಸಬುಗಳನ್ನು ಸ್ವತಃ ಬಲ್ಲ ಪ್ರಾಮಾಣಿಕತೆಯೂ ಧೈರ್ಯವೂ, ದೇಶಾಭಿಮಾನವೂ ಉಳ್ಳ ವಿದ್ಯಾವಂತರನ್ನೇ ಶಿಕ್ಷಕರನ್ನಾಗಿ ನೇಮಿಸಬೇಕು. ಇಂತಹವರು ತಮ್ಮ ತಮ್ಮ ಕಸಬು, ಉಪಕಸಬುಗಳ ಮೇಲ್ವಿಚಾರಕರಾಗಿದ್ದು ಕಷ್ಟ ಸುಖಗಳನ್ನರಿತು, ವಿದ್ಯಾರ್ಥಿಗಳಿಗೆ ಬೋಧಿಸುವಂತಿರಬೇಕು. ಅಲ್ಲದೆ, ವಿದ್ಯಾರ್ಥಿಗಳನ್ನು ತಮ್ಮೊಂದಿಗೆ ಕೆಲಸ ಮಾಡುವಂತೆ ಮಾಡಿ ತನ್ಮೂಲಕ ಅವರಿಗೆ ಸ್ವತಃ ಕೆಲಸ ಮಾಡತಕ್ಕ ಯೋಗ್ಯತೆ ಬರುವಂತೆ ಮಾಡಬೇಕು ವಿದ್ಯಾರ್ಥಿಗಳ ಸಹಾಯದಿಂದ ತಮ್ಮ ಮೇಲ್ವಿಚಾರಣೆಯಲ್ಲಿರುವ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ತಮ್ಮ ಜೀವನಕ್ಕೂ ಮತ್ತು ವಿದ್ಯಾರ್ಥಿಗಳ ಜೀವನಕ್ಕೂ ಸಾಧ್ಯವಾದಮಟ್ಟಿಗೆ ಸಂಪಾದಿಸುವಂತಿರಬೇಕು. ಇಂತಹ ಶಿಕ್ಷಣ ಕೇಂದ್ರಗಳಲ್ಲಿ ಕಲಿತ ವಿದ್ಯಾವಂತರು ತಮ್ಮ ಸ್ವಗ್ರಾಮಗಳಿಗೆ ತೆರಳಿದನಂತರ ತಮ್ಮ ಕೆಲಸ ಕಾರ್ಯಗಳಲ್ಲಿ

ನಿರತರಾಗಿ ಬರತಕ್ಕ ಅನುಮಾನಗಳ ಪರಿಹಾರಕ್ಕೆ ಕೇಂದ್ರಗಳಲ್ಲಿರುವ ತಮ್ಮ ಗುರುಗಳಿಗೆ ಬರೆದು ತಿಳಿದುಕೊಳ್ಳುವ ವ್ಯವಸ್ಥೆ ಇರಬೇಕು. ಈಗಿನ ವಿದ್ಯಾಭ್ಯಾಸದಿಂದ ತಮ್ಮ ಮಕ್ಕಳು ಸೋಮಾರಿಗಳೂ ಆಗುವುದಲ್ಲದೆ, ತಮ್ಮ ಕುಲಕಸಬನ್ನು ಮರೆತು ತಮಗೊಂದು ಹೊರೆಯಾಗಿ ಪರಿಣಮಿಸುವುದರಿಂದ ತಂದೆ ತಾಯಿಗಳು ಮಕ್ಕಳನ್ನು ವಿದ್ಯಾವಂತರಾಗಲು ತುಂಬು ಮನಸ್ಸಿನಿಂದ ಪ್ರೋತ್ಸಾಹಿಸುವುದಿಲ್ಲ. ಆದರೆ ಇಂತಹ ಶಿಕ್ಷಣ ಕೇಂದ್ರಗಳಲ್ಲಿ ಕಲಿಯಲು ಯಾರ ಅಡ್ಡಿ ಆತಂಕಗಳು ಇಲ್ಲದೆ ಮನಸ್ಸು ಪೂರ್ತಿಯಾಗಿ ಪ್ರೋತ್ಸಾಹವೇ ಸಿಕ್ಕುತ್ತದೆ. ಕೇಂದ್ರಗಳಲ್ಲಿ ಕಲಿತ ರೈತರ ಮಕ್ಕಳೆಲ್ಲರ ವಿದ್ಯಾಮಟ್ಟವು ಒಂದೇ ತೆರನಾಗಿರುವುದಲ್ಲದೆ, ಒಂದೇ ವಿಧವಾದ ಶಿಸ್ತಿನ ಕ್ರಮದಲ್ಲಿ ತರಪೇತಾಗುವುದರಿಂದ ಇವರಲ್ಲಿ ಒಂದು ವಿಧವಾದ ಸಜಾತೀಯ ಬಾಂಧವ್ಯ ಮತ್ತು ಐಕ್ಯಮತ್ಯ ಉತ್ಪನ್ನವಾಗಿ ತ್ಯಾಗ ಬುದ್ಧಿಯನ್ನುಂಟುಮಾಡುವ ಸಂಸ್ಥೆಗಳ ಸ್ಥಾಪನೆಯಿಂದ, ದೇಶಾಭ್ಯುದಯದ ಸಾಮೂಹಿಕವಾದ ಪ್ರಯತ್ನಗಳನ್ನು ಜರುಗಿಸಲು ಸುಲಭ ಸಾಧ್ಯವಾಗುತ್ತದೆ. ಈಗಿನ ವಿದ್ಯಾಭ್ಯಾಸ ಕ್ರಮವೇ ಅವಿದ್ಯಾವಂತರ ಮತ್ತು ನಿರುದ್ಯೋಗಿಗಳ ಸಂಖ್ಯೆಯ ಬೆಳವಣಿಗೆಗೆ ಕಾರಣ. ಉಪಾಧ್ಯಾಯರುಗಳಿಗೂ ಈಗಿರುವಂತೆ ಜೀವನ ನಡೆಸಲು ತೊಂದರೆಗಳಿರಬಾರದು. ಆಗ ಉಪಾಧ್ಯಾಯರಿಗೂ ಜೀವನದ ಸಮಸ್ಯೆ ಬಗೆಹರಿದು, ವಿದ್ಯಾರ್ಥಿಗಳ ಯೋಗಕ್ಷೇಮವೇ ಮುಖ್ಯ ಗುರಿಯಾಗಿರುತ್ತೆ. ಇಂತಹ ವಾತಾವರಣ ಏರ್ಪಡುವುದರಿಂದ ಶಿಕ್ಷಣ ಕೇಂದ್ರಗಳು ಜನಾಧರಣೀಯವಾಗುವುದರಲ್ಲಿ ಸಂಶಯವಿಲ್ಲ. ಇಂತಹ ಕೇಂದಗಳ ಮೇಲ್ವಿಚಾರಣೆಗಾಗಿ ಒಂದು ಸಮಿತಿ ಇದ್ದು, ಕೇಂದ್ರದ ಕೆಲಸ ಕಾರ್ಯಗಳನ್ನು ಆಗಿಂದಾಗ್ಯೆ ಪರಿಶೀಲಿಸಿ ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಡೆಯಿಸಲು ಇರುವ ಅಡ್ಡಿ ಆತಂಕಗಳು ನಿವಾರಣೆಯಾಗುವಂತಹ ಯುಕ್ತ ಸಲಹೆಗಳನ್ನು ಕೊಡುವಂತಾಗಬೇಕು. ಇಂತಹ ಕೇಂದ್ರಗಳ ಸಂಖ್ಯೆಯನ್ನು ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಹೆಚ್ಚಿಸಬೇಕು. ಖಾಸಗಿ ಜನರ ಸಹಕಾರ ಬೆಂಬಲವು ಈ ಕೇಂದ್ರಗಳಿಗೆ ಲಭಿಸದಿರಲಾರವು. ಈ ಕೇಂದ್ರಗಳಲ್ಲಿ ತೇರ್ಗಡೆಯಾದ ಬಡ ವಿದ್ಯಾರ್ಥಿಗಳಿಗೆ ಸರ್ಕಾರದವರು ಅಲ್ಲಲ್ಲಿ ಅಂದರೆ ವಿದ್ಯಾರ್ಥಿಗಳು ಇಷ್ಟ ಪಡುವ ಕಡೆ ಜಮೀನುಗಳನ್ನು ಕೊಟ್ಟು ಕೆಲಸ ಪ್ರಾರಂಭಿಸುವ ಸನ್ನಿವೇಶವನ್ನು ಕಲ್ಪಿಸಿದರೆ ಅದರಿಂದ ಸಾಮಾನ್ಯರಿಗೂ ಪ್ರಯೋಜನವಾಗುವುದರಲ್ಲಿ ಸಂಶಯವಿಲ್ಲ. ಪ್ರತಿ ಹೋಬಳಿಯಲ್ಲೂ ಇಂತಹ ವಿದ್ಯಾವಂತರ ಗುಂಪುಗಳನ್ನು ಕೂಡಿಸಿ ಮಾದರಿ ಕ್ಷೇತ್ರಗಳನ್ನು ತೆರೆಯಲು ಉತ್ತೇಜನ ಕೊಡುವುದರ ಮೂಲಕ ಕೂಡೊಕ್ಕಲುತನದ ಮಹಿಮೆಯನ್ನು ಜನರಿಗೆ ಬೋಧಿಸಲು ಅನುಕೂಲವಾಗುತ್ತದೆ.

ನಮ್ಮ ಹಿಂದೂ ದೇಶದಲ್ಲಿ ಒಂದು ಲಕ್ಷ ಜನ ಸಮಾಜ ಸುಧಾರಕರನ್ನು ತರಪೇತುಮಾಡುವ ಯೋಜನೆ ತಯಾರಿಸಿ ಅವರಿಗೆ ವಿಶ್ವವಿದ್ಯಾನಿಲಯದ ಪದವೀಧರರಿಗಿಂತಲೂ ಹೆಚ್ಚು ಜ್ಞಾನ ಮತ್ತು ಅನುಭವಗಳನ್ನು ಹೊಂದಲು ಅವಕಾಶ ಕಲ್ಪಿಸುವ ಸುಯೋಗವಿದೆ. ಪ್ರಚಾರ ಮಾಡುವುದಕ್ಕಿಂತಲೂ ಪ್ರತ್ಯಕ್ಷ ಆಚರಿಸುವುದರಿಂದ ಒಳ್ಳೆಯ ಪರಿಣಾಮಗಳಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಸಮಾಜ ಸುಧಾರಕರಿಗೆ ಸಿಕ್ಕುವ ಶಿಕ್ಷಣದಲ್ಲಿ ಸ್ವಲ್ಪ ಮಟ್ಟಿನ ಶಿಕ್ಷಣ ನಮ್ಮ ರೈತರ ಮಕ್ಕಳಿಗೆ ದೊರೆಯುವಂತಾದರೆ ಅಭಿಮಾನಶಾಲಿಗಳಾದ ರೈತರನ್ನು ನಾವು ಕಣ್ಣು ತುಂಬ ನೋಡಿ ನಲಿಯಬಹುದು. ಆಗ ಸಂಬಳದ ನೌಕರರಾಗಿ ಬಾಳುವ ಆಕಾಂಕ್ಷೆ ತೊಲಗಿ, ದೇಶದಾದ್ಯಂತವೂ ಸಹ ಸ್ವತಂತ್ರ ಜೀವನ ಮಾಡುವ ಸಾಹಸದ ಮನೋಭಾವವೇರ್ಪಟ್ಟು ದೇಶದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ.

ಒಟ್ಟಿನಲ್ಲಿ ನಮ್ಮ ದೇಶದ ಗ್ರಾಮ ಸುಧಾರಕರ ವಿದ್ಯಾಮಟ್ಟವು ಮತ್ತು ಸಂಖ್ಯೆಯು ಮೇಲ್ಕಂಡವರಿಗಿಂತಲೂ ಕಡಿಮೆಯಾಗಿದ್ದು ದೀರ್ಘ ಶಿಕ್ಷಣವು ದೊರೆಯದಿದ್ದರೂ ಸಹ, ತುಂಬು ಮನಸ್ಸಿನಿಂದ ಕಾಯ–ವಾಚ–ಮನಸ ಕೆಲಸ ಮಾಡಿದರೆ, ತಕ್ಕ ಪರಿಣಾಮಗಳುಂಟಾಗದಿರಲಾರವು.

ಈಗ್ಯೆ ಕೆಲವು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಬೆಂಗಳೂರಿಗೆ ಸಮೀಪದಲ್ಲಿರುವ ಕೃಷ್ಣರಾಜಪುರದಲ್ಲಿ ಅಮೆರಿಕಾ ದೇಶದ 'ಸೆವೆನ್ತ್ ಡೇ ಅಡ್ ವೆಂಟೆಸ್ಟ್'ಮಿಷನರಿಗಳ ಆಶ್ರಯದಲ್ಲಿ ಸ್ಪೆöಸರ್ ಕಾಲೇಜು ಎಂಬುದೊಂದು ಕ್ರೈಸ್ತ ಗುರುಕುಲವಿದ್ದಿತು. ಅಲ್ಲಿ ಪ್ರಪಂಚದ ನಾನಾ ಭಾಗಗಳಿಂದಲೂ ಕ್ರೈಸ್ತ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರನ್ನು ಮತಪ್ರಚಾರಕನ್ನಾಗಿ ತರಪೇತುಮಾಡುವುದೇ ಆ ಸಂಸ್ಥೆಯ ಮುಖ್ಯೋದ್ದೇಶ್ಯವಾಗಿತ್ತು. ಆದರೂ ಸಹ ವಿದ್ಯಾರ್ಥಿಗಳಿಗೆ ವ್ಯವಸಾಯ, ಹೈನದ ಕೆಲಸ, ಕೋಳಿ ಸಾಕಾಣಿಕೆ, ಪ್ರಿಂಟಿಂಗ್ ವಗ್ಯೆರೆ ಕಸಬುಗಳನ್ನು ಕೈಯಾರ ಕಲಿಸುವ ವ್ಯವಸ್ಥೆಯಿದ್ದಿತು. ವಿದ್ಯಾರ್ಥಿಗಳೇ ತಮ್ಮ ದಿನಚರಿಯ ಕೆಲಸ ಕಾರ್ಯಗಳನ್ನು ಸರದಿಯ ಮೇಲೆ ಗುಂಪು ಗುಂಪುಗಳಾಗಿ ಮಾಡಬೇಕೆಂದು ವಿಧಾಯಕವಾಗಿದ್ದಿತು. ಇವರ ಸಹಾಯಕ್ಕೆ ಆಳುಕಾಳುಗಳಿರಲಿಲ್ಲ ಒಂದೇ ಮತಕ್ಕೆಸೇರಿ ಊಟ ಉಪಚಾರಗಳಿಗೆಗೊಂದಲವಿಲ್ಲದುದರಿಂದ ಅಡಿಗೆಯನ್ನೂ ಸರದಿಯ ಮೇಲೆ ಮಾಡುತ್ತಿದ್ದರು. ಕಕ್ಕಸುಗಳನ್ನು ಕೂಡ ಇವರೇ

ನಾಜೂಕು ಮಾಡಬೇಕಾಗಿದ್ದಿತು. ಇವರ ಗುರುಗಳೆಲ್ಲಾ ಸಂಸಾರದೊಂದಿಗರಾಗಿದ್ದರೂ ಸಹ, ಆಳುಗಳನ್ನು ನೇಮಿಸಿಕೊಳ್ಳದೆ ತಮ್ಮ ಕೆಲಸಗಳನ್ನು ತಾವೇ ಸಾಧ್ಯವಾದಷ್ಟು ಮಟ್ಟಿಗೆ ನೆರವೇರಿಸಿಕೊಳ್ಳುತ್ತಿದ್ದರು. ನನಗೆ ತಿಳಿದ ಮಟ್ಟಿಗೆ ವಿದ್ಯಾರ್ಥಿಗಳೇ ಅವರ ಗುರುಗಳ ಮನೆ ಕೆಲಸಗಳಲ್ಲೂ ತಕ್ಕ ಮಟ್ಟಿಗೆ ನೆರವಾಗುತ್ತಿದ್ದರು. ಅಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯೂ, ಕಷ್ಟಪಟ್ಟು ಕೆಲಸಮಾಡಿ ಸಂಪಾದಿಸಿ ಜೀವಿಸುವಂತಹ ವ್ಯವಸ್ಥೆಯಿದ್ದಿತು. ಅವರಿಗೂ ನಾಲ್ಕು ವರುಷ ಶಿಕ್ಷಣ ಕ್ರಮವಿದ್ದಿತು. ಇಂತಹ ಮಾದರಿಯಲ್ಲೇ ನಮ್ಮ ಭಾವಿ ಸಮಾಜ ಸುಧಾರಕರಿಗೂ ಶಿಕ್ಷಣ ದೊರಿಯಬಹುದೆಂದು ಭಾವಿಸಬಹುದಾಗಿರುತ್ತದೆ. ದೇಶಾಭಿಮಾನಿಯಾಗುವುದಕ್ಕೆ ಮೊದಲು ಗ್ರಾಮಾಭಿಮಾನಿಯಾಗುವುದನ್ನು ಚೆನ್ನಾಗಿ ಕಲಿತರೆ ದೇಶಕ್ಕೂ ಕ್ಷೇಮ ಮತ್ತು ದೇಶದ ಜನರಿಗೂ ಕ್ಷೇಮ. ಇಂತಹ ಅಭಿಮಾನಿಶಾಲಿಗಳಿಂದ ಹಳ್ಳಿಯ ರೈತರಿಗೆ ಬಹಳ ಉಪಕಾರವಾಗುವುದರಲ್ಲಿ ಸಂಶಯವಿಲ್ಲ.

ಯುದ್ಧಾನಂತರ ಕೋಟಿಗಟ್ಲೆ ರೂಪಾಯಿಗಳನ್ನು ದೇಶದ ಅಭಿವೃದ್ಧಿಗಾಗಿ ಖರ್ಚು ಮಾಡುವಂತಹ ಘನವಾದ ಯೋಜನೆಗಳನ್ನು ತಯಾರಿಸುವಾಗ, ರೈತರ ಮಕ್ಕಳ ಹಿತರಕ್ಷಣೆಗೆ ಅತ್ಯಗತ್ಯವಾಗಿ ಬೇಕಾದ ಮೇಲ್ಕಂಡ ರೀತಿಯ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಬೇಕಾಗುವ ಹಣವನ್ನು ಒದಗಿಸುವುದಲ್ಲದೆ, ಈಗಿನ ವಿದ್ಯಾಭ್ಯಾಸ ಕ್ರಮದಿಂದ ರೈತರ ಸಮಾಜದ ಮೇಲುಂಟಾಗುತ್ತಿರುವ ದುಷ್ಪರಿಣಾಮಗಳನ್ನು ಗಮನಿಸಿ, ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳ ಪಾಠಕ್ರಮಗಳನ್ನು ಸಂಪೂರ್ಣವಾಗಿ ಬದಲಾಯಿಸಿ ತನ್ಮೂಲಕ ಶಿಕ್ಷಣ ಕೇಂದ್ರಗಳಲ್ಲಿ ತರಪೇತಾಗಲು ತಕ್ಕ ಯೋಗ್ಯತೆಯನ್ನು ಪಡೆಯುವ ಪಾಠಕ್ರಮಗಳನ್ನು ಜಾರಿಗೆ ತರುವಂತಹ ಕಾರ್ಯಕ್ರಮಗಳನ್ನೂ ಸೇರಿಸಬೇಕಾಗಿದೆ. ಇದರಿಂದ ನಮ್ಮ ದೇಶಕ್ಕೆ ಬೆನ್ನು ಮೂಳೆಯಂತಿರುವ ಕಸಬುದಾರರ ಹಿತವನ್ನು ರಕ್ಷಿಸಿದಂತಾಗುವುದಲ್ಲದೆ, ಈಗಿನ ವಿದ್ಯಾಭ್ಯಾಸ ಕ್ರಮದಿಂದ ಆಗುತ್ತಿರುವ ಅಪಾರ ನಷ್ಟವನ್ನೂ ಮತ್ತು ದುಷ್ಪರಿಣಾಮಗಳನ್ನೂ ಯೋಗ್ಯಕಾಲದಲ್ಲಿಯೇ ತಡೆಗಟ್ಟಿದಂತಾಗುತ್ತದೆ ಇಂತಹ ಸನ್ನಿವೇಶ ದೊರಕಿದರೆ ಪ್ರತಿಯೊಬ್ಬ ವ್ಯವಸಾಯಗಾರನ ಮಗನೂ ವಿದ್ಯಾವಂತನಾಗುವುದಲ್ಲದೆ, ನಿರುದ್ಯೋಗಿಯಾಗದೆ, ಇತರರಿಗೆ ಹೊರೆಯಾಗದೆ, ಶಿಸ್ತು ಸಮಾಧಾನದಿಂದ ತನ್ನ ಕೆಲಸ ಕಾರ್ಯಗಳನ್ನು ಹೆಚ್ಚು ದಕ್ಷತೆಯಿಂದ ಯಾವ ದೇಶದ ರೈತನಿಗೂ ಕಡಿಮೆಯಿಲ್ಲದಂತೆ ಮಾಡಬಹುದಾಗಿರುತ್ತೆ. ಇಂತಹ ಸದವಕಾಶವನ್ನುಂಟುಮಾಡಿಕೊಟ್ಟರೆ ರೈತ ಜನಾಂಗದಲ್ಲಿ

ಮನೆಮಾಡಿಕೊಂಡಿರುವ ಜಡತ್ವ, ಅವಿದ್ಯೆ, ಅಜ್ಞಾನಗಳು ತೊಲಗಿ ರೈತರ ಮಕ್ಕಳೆಲ್ಲಾ ಯಶೋವಂತರಾಗಿ ಬಾಳುವಂತಾಗುತ್ತದೆ.

# ಗ್ರಾಮೋದ್ಧಾರವಾಗುವುದೆಂದು?

ಗ್ರಾಮೋದ್ಧಾರವಾಗಬೇಕಾದರೆ, ಗ್ರಾಮಸ್ಥರ ಸಮಸ್ಯೆಗಳನ್ನೆಲ್ಲಾ ಕೂಲಂಕಷವಾಗಿ ಅರಿತುಕೊಂಡು ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು ಗ್ರಾಮಸ್ಥರ ಸಮಸ್ಯೆಗಳಂತೂ ನೂರಾರಿವೆ ಎಂಬುದು ಕಾರ್ಯಾಚರಣೆಗೆ ತೊಡಗಿರತಕ್ಕ ಮಹನೀಯರಿಗೆಲ್ಲಾ ತಿಳಿದಿದೆ. ನಮ್ಮ ದೇಶದ ಸ್ಥಿತಿಗತಿಗಳಿಗನುಸಾರವಾಗಿ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕೆಂಬುದು ಅನುಭವದಿಂದ ತಿಳಿದು ಬರುವುದಲ್ಲದೆ, ಪ್ರವೀಣರ ಅಭಿಪ್ರಾಯಗಳೂ ಸಹ, ಇದನ್ನು ಪುಷ್ಟೀಕರಿಸುತ್ತವೆ.

ಕೇವಲ, ಬಾವಿ ಚರಂಡಿಗಳಿಂದಲೇ, ಪಾನನಿರೋದ ಚಳುವಳಿಯಿಂದಲೇ ವಿಧವಾ ವಿವಾಹಗಳಿಂದಲೇ, ಜನರ ಮತ್ತು ಪ್ರಾಣಿಗಳ ಜಾತಿ ಸಂಕ್ರಮಣದಿಂದಲೇ ದೇಶದಭಿವೃದ್ಧಿ ಸಾಧಿಸಬಹುದೆಂಬುದನ್ನು ನಂಬಲಾಗದು, ಇಂತಹ ಕಾರ್ಯಾಚರಣೆಗಳಿಂದಲೇ ಗ್ರಾಮೋದ್ಧಾರವಾಗುವುದೆಂದು? ಎಂಬ ಸಂದೇಹ ಬರುವುದು ಸಹಜವಾಗಿದೆ. ಗ್ರಾಮಸ್ಥರ ಸಮಸ್ಯೆಗಳಿಗೂ, ಪಟ್ಟಣಿಗರ ಸಮಸ್ಯೆಗಳಿಗೂ ಎಷ್ಟೋ ವ್ಯತ್ಯಾಸವಿದೆ. ಆದುದರಿಂದ ರೈತನ ಹಿತೈಷಿಗಳೆಲ್ಲರೂ, ರೈತನ ಹಿತದೃಷ್ಟಿಯಿಂದ ಕೆಲಸಕಾರ್ಯಗಳನ್ನು ತ್ರಿಕರಣ ಶುದ್ಧಿಯಾಗಿ ಕೈಗೊಳ್ಳಬೇಕೆಂಬುದೇ ನನ್ನ ವಿನಂತಿ.